

ಮಾನಸಿ

ಜನವರಿ 2003

ತಿಂಗಳ ಪತ್ರಿಕೆ

ಮಾನಸ

ತಿಂಗಳ ಪತ್ರಿಕೆ ಜನವರಿ 2003

ಸಂಪುಟ 18 ಸಂಚಿಕೆ : 01

ಮುಖ್ಯಪುಟ : ಇಸ್ಮತ್ ಚುಗ್‌ತಾಯಿ

ವಿನ್ಯಾಸ : ಫರಾನ

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಮಾನಸ ಓದುಗರಿಗೆ ಹೊಸ ವರ್ಷದ ಆತ್ಮೀಯ ಶುಭಾಶಯಗಳು

ಸ್ತ್ರೀವಾದಿ ಚಳುವಳಿ - ಪುರುಷ ಪ್ರಧಾನ ವ್ಯವಸ್ಥೆಯ ರಚನೆ, ಸಂವೇದನೆಗಳಿಗೆ, ಬಂಡವಾಳ ಶಾಹಿ ಸಮಾಜದ ದಿವಾಳಿತನಗಳಿಗೆ ಸವಾಲು ಎಸೆಯುತ್ತಿರುವ ಇಂದಿನ ಸಂದರ್ಭದಲ್ಲಿ ಲೇಖಕಿಯರ ಬರಹಗಳಲ್ಲಿ ಮತ್ತೆ ಅಭಿವ್ಯಕ್ತಿಯ ಕೊರತೆ, ವೈರುದ್ಧ್ಯಗಳು, ಸ್ವ-ನಿಬಂಧನೆಗಳು, ವಸ್ತುವಿನ ಆಯ್ಕೆಯ ಮಿತಿಗಳು ಕಣ್ಣಿಗೆ ರಾಚುವ ಸಂಗತಿಗಳಾಗಿವೆ ಬರಹ, ಜೀವನ ಇವೆರೆಡರ ಮಧ್ಯದ ಆಯ್ಕೆಯ ಪ್ರಶ್ನೆಯನ್ನು ಗಂಭೀರವಾಗಿ ಬರೆಯುತ್ತಿರುವ ಲೇಖಕಿಯರ ಮುಂದೆ ಇಡಲಾಗುತ್ತಿದೆ. ಇದು ಸಾವು ಹಾಗೂ ಬದುಕಿನ ಪ್ರಶ್ನೆಯಷ್ಟು ಗಂಭೀರವಾದ ಆಯ್ಕೆ ಅನ್ನಿಸಿದ್ದನ್ನು ಹೇಳಲಾರದ, ಬರೆಯಲಾರದ ಸ್ಥಿತಿಯಲ್ಲಿ ನಾವು ಅಂದಿಗೆ ಹಾಗೂ ಇಂದಿಗೂ ಬದುಕುತ್ತಿದ್ದೇವೆ.

ಮುಸ್ಲಿಂ ಮಹಿಳಾ ಲೇಖಕಿಯರು ಇದಕ್ಕೆ ಹೊರತಾಗಿಲ್ಲ. ಸಾರಾ ಅಬೂಬಕರ್ ಹಾಗೂ ಭಾನು ಮುಷ್ತಾಕ್-ಬರಹಗಳಿಗೆ ಸಿಕ್ಕ ಸಂವೇದನೆಗಳನ್ನು ನಾವು ಗಮನಿಸಬಹುದಾಗಿದೆ. ಆಕ್ರಮಣ, ಬಹಿಷ್ಕಾರ ಮಟ್ಟದ ಪ್ರತಿಕ್ರಿಯೆಗಳು ಬರಹಗಾರ್ತಿಯರ ಬರಹದ ಚೈತನ್ಯವನ್ನು ಎಷ್ಟರ ಮಟ್ಟಿಗೆ ಕಾಯಬಲ್ಲವು ಎಂಬುದು ಪ್ರಶ್ನೆಯಾಗುತ್ತದೆ. ಲೇಖಕಿಯರ ಮುಖ್ಯವಾದ ಸಮಸ್ಯೆಗಳು - ಇಮೇಜಿನ ಪ್ರಶ್ನೆ, ಅಸ್ತಿತ್ವದ ಪ್ರಶ್ನೆ, ಕುಟುಂಬ, ಸಮುದಾಯದಿಂದ - ದೂರವಾಗಿ ಬಿಡುವ ಪ್ರಶ್ನೆ. ತಾಯ್ತನದ ಹಿನ್ನಲೆಯಲ್ಲಿ ಎದುರಾಗುವ ಮಕ್ಕಳ ಭವಿಷ್ಯದ ಪ್ರಶ್ನೆ. ಪುರುಷ ಬರಹಗಾರರು ಇದರಿಂದ ಹೊರತೆಂದೇನಲ್ಲ. ಆದರೆ ಕುಟುಂಬದಲ್ಲಿ, ಸಮಾಜದಲ್ಲಿ ಸಂಸ್ಕೃತಿಯ ಪ್ರತೀಕವಾಗಿಬಿಡುವ ಹೆಣ್ಣಿನ ಮೇಲೆ ಹಾಕಿರುವ ದಿಗ್ಬಂಧನಗಳು ಲೇಖಕಿಯರ ಬರಹದ ಸ್ವರೂಪ, ವಸ್ತು, ಮಿತಿಯನ್ನು ನಿರ್ಧರಿಸಿ ಬಿಡುತ್ತವೆ. ಸ್ವಯಂ ನಿಭಂಧನೆಗಳನ್ನು ಹಾಕಿಕೊಂಡು ಬರೆಯುವ ಬರಹಗಾರ್ತಿಯರು ವೈಯಕ್ತಿಕ ಹಂತಗಳ ಮಿತಿಗಳನ್ನು ಪರಸ್ಪರ ಹಂಚಿಕೊಂಡ ನಿದರ್ಶನಗಳೂ ಇವೆ. ಜೊತೆಗೆ ಮಹಿಳಾ ಚಳುವಳಿಯ ಸಂಪರ್ಕವಿರದ ಬಹುತೇಕ ಲೇಖಕಿಯರು ಜಾತಿ, ವರ್ಗಗಳ ಮಿತಿಗಳ ಪ್ರಕ್ರಿಯವನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ.

ಈ ಹಿನ್ನಲೆಯಲ್ಲಿ ಗಮನಿಸಿದಾಗ ಇಸ್ಮತ್ 40ರ ದಶಕದಲ್ಲಿ ಮುಕ್ತ ಬರವಣಿಗೆಗೆ ಒಡ್ಡಿಕೊಂಡಿದ್ದು ಆಕೆಯ ವ್ಯಕ್ತಿತ್ವದ ವಿಶಿಷ್ಠತೆಯನ್ನು ಎತ್ತಿ ಹಿಡಿಯುತ್ತದೆ. ಲೇಖಕಿಯ ಮನಸ್ಸು ಆಧುನಿಕ ಹೆಣ್ಣಿನ ತುಮುಲಗಳನ್ನು ಸಮರ್ಥವಾಗಿ ಕಾಣಬಲ್ಲದಾಗಿತ್ತು ಎಂಬುದು ಮುಖ್ಯ ಇಸ್ಮತ್, ಅಮೃತಾ ಪ್ರೀತಂ ಮಹಾಶ್ವೇತಾ ದೇವಿಯವರಂತೆ ಬದುಕಿನ ಸವಾಲುಗಳನ್ನು ಸ್ವೀಕರಿಸುತ್ತಲೇ, ಆ ಸವಾಲುಗಳನ್ನು ಸೃಜನಶೀಲ ಬರಹಗಳಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತಿಸಿ, ಹೊಸ ಸಾಹಿತ್ಯ ಮಾದರಿಯ ಚರಿತ್ರೆ ಹುಟ್ಟು ಹಾಕುವ ಲೇಖಕಿಯರ ಸಂಖ್ಯೆ ನಮ್ಮಲ್ಲಿ ಹೆಚ್ಚಾಗಬೇಕಾಗಿದೆ. ಇದಕ್ಕಾಗಿ, ಮಹಿಳಾ ಚಳುವಳಿಯ ಜೊತೆಗೆ ಲೇಖಕಿಯರ ಬಾಂಧವ್ಯ ಕೂಡಾ ಹೆಚ್ಚಾಗಬೇಕಿದೆ.

- ಸಂಪಾದಕ ಮಂಡಳಿ

" ಇಸ್ಮತ್ ಚುಗ್‌ತಾಯಿ "

ಇಸ್ಮತ್ ಚುಗ್‌ತಾಯಿ ಉರ್ದು ಸಣ್ಣ ಕತೆ ಬೆಳೆಸುವಲ್ಲಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸಿದ್ದಾಳೆ. 1930 ಹಾಗೂ 40 ರ ದಶಕದಲ್ಲಿ ಮಹಿಳೆಯ ಬಗ್ಗೆ ಬರೆಯುವುದೇನೋ ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. 1944ರಲ್ಲಿ ಆಕೆ 'ಲಿಹಾಫ್ ಎನ್ನುವ ಕತೆಯನ್ನು ಪ್ರಕಟಿಸಿದಳು, ಅದು ಉರ್ದು ಸಣ್ಣ ಕತೆಗಳಲ್ಲಿ ಯೇ ಒಂದು ದೊಡ್ಡ ಮಹತ್ವದ ಸಾಧನೆಯಾಗಿತ್ತು. ಈಕೆ ಈ ಕತೆ ಬರೆದದ್ದು 1942ರಲ್ಲಿ, ಆಕೆಯ ಮದುವೆಯ 2 ತಿಂಗಳ ಮೊದಲು. 'ಲಿಹಾಫ್'ನಲ್ಲಿ ಒಬ್ಬ ನವಾಬನ ಹೆಂಡತಿ - ಮನೋಕ್ಲೇಶಕ್ಕೊಳಗಾದವಳು. ಈಕೆಯ ಮನೋಕ್ಲೇಶ ಉಂಟಾದುದೇ ಆಕೆಯ ನವಾಬ ಗಂಡನಿಂದಾಗಿ . ಅವಳಿಗಾಗಿ ನವಾಬ ಸಮಯ ಕೊಡಲಾರ. ಹಾಗಾಗಿ ಆಕೆ ತನ್ನ ಲೈಂಗಿಕ ಹಾಗೂ ಭಾವನಾತ್ಮಕ ಅಭಿವ್ಯಕ್ತಿಯನ್ನು ತನ್ನ ಸೇವಕಿಯೊಬ್ಬಳಲ್ಲಿ ಕಂಡುಕೊಳ್ಳುತ್ತಾಳೆ. ಈ ಕಥೆಯ ನಿರೂಪಕಿ ತನ್ನ ಬಾಲ್ಯದ ಘಟನೆಯೊಂದನ್ನು ಇಲ್ಲಿ ನಿರೂಪಿಸುತ್ತಾಳೆ. ಒಂಭತ್ತು ವರುಷದ ಮಗುವಿನ ಕಣ್ಣು ಬೇಗಂ ಹಾಗೂ ಸೇವಕಿಯ ನಡುವಿನ 'ಲೆಸ್‌ಬಿಯನ್'ಸಂಬಂಧವನ್ನು ಬಿಚ್ಚಿ ಇಡುತ್ತದೆ.

ಈ ಕತೆ ಪ್ರಕಟವಾದ ಎರಡು ತಿಂಗಳ ನಂತರ ಇಸ್ಮತ್ ವಿವಾದದ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡಳು. ಈ ಕತೆ ಆಕೆ ಬರೆದುದೇ ಅಲ್ಲವೆಂದು ಹೇಳಲಾಯಿತು. ವಿಮರ್ಶಕರು 'ಇಸ್ಮತ್ ಚುಗ್‌ತಾಯಿ 'ಯ ಹೆಸರಿನಲ್ಲಿ ಗಂಡಸು ಬರೆದ ಕತೆ ಎಂದು ಅನುಮಾನಿಸಿದರು. ಇಸ್ಮತ್ ಹೆಸರೇ ಒಂದು ರೀತಿಯ ಗೊಂದಲ ಹಾಗೂ ಮುಜುಗರ ಉಂಟು ಮಾಡುವಂತಿತ್ತು. ಓದುಗರು ಹಾಗೂ ವಿಮರ್ಶಕರು ಈ ಕತೆಯಲ್ಲಿ 'ಅಸಹ್ಯ'ದ ಬಗ್ಗೆ ಸೊಲ್ಲೆತ್ತಿ ಗೊಣಗಿದ್ದರು. ಕತೆ 'ಅಸಹ್ಯಕರ'ವೆಂಬ ಆರೋಪದ ಮೇಲೆ ಲಾಹೋರ್ ಕೋರ್ಟಿನಲ್ಲಿ ಇಸ್ಮತ್ ಟ್ರಯಲ್ ಎದುರಿಸಬೇಕಾಯಿತು. ಈ 'ಕೋರ್ಟ ಟ್ರಯಲ್ ಎರೆಡು ವರ್ಷಗಳ ಕಾಲ ನಡೆಯಿತು. ನ್ಯಾಯಾಲಯ 'ಅಸಹ್ಯಕರ' ವಾದುದೇನನ್ನೂ ಕತೆಯಲ್ಲಿ ಕಾಣಲಿಲ್ಲ ವಾದ್ದರಿಂದ. ಆಕೆಯ ವಿರುದ್ಧದ ಕೇಸ್‌ನ್ನು ಎರೆಡು ವರ್ಷದ ನಂತರ ವಜಾ ಮಾಡಲಾಯಿತು ಇಸ್ಮತ್ ನಂತರ ಅನೇಕ ಕತೆಗಳನ್ನು ಬರೆದಳು. 'ಹಿಂದುಸ್ತಾನ್ ಚೋರ್ ದೋ' 'ಕಾಲು', 'ಜೋಡಿ ಅಪಾ', 'ದೋ ಹಾಥ್ ', 'ಬದನ್ ಕಿ ಖುಷಬೂ', 'ನವಾಲಾ', 'ಚಾಹುತಿ ಕಾ ಜೊರಾ', 'ಗುಂಘಟ್'. ಹೀಗೆ ಅನೇಕ ಕತೆಗಳನ್ನು ಇಸ್ಮತ್ ಬರೆದು ಮುಸ್ಲಿಂ ಮಹಿಳೆಯರನ್ನಷ್ಟೇ ಅಲ್ಲ ಎಲ್ಲ ಮಹಿಳೆಯರನ್ನು ತಮ್ಮ ವ್ಯಕ್ತಿತ್ವದ ಒಳಗುಗಳನ್ನು ಬಿಚ್ಚಿ ನೋಡಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾಳೆ. 'ತೆರ್‌ಹಿ ಲಾಕಿರ್ '- ಆಕೆಯ ಅತ್ಯುತ್ತಮ ಕಾದಂಬರಿ. ಇಸ್ಮತ್‌ಳ ಬಾಲ್ಯ, ಬಾಲ್ಯದಲ್ಲಿ ಕಂಡ ಅನೇಕರು ಈ ಕಾದಂಬರಿಯ ವಸ್ತುವಾಗಿದ್ದಾರೆ.

ಇಸ್ಮತ್ ತನ್ನ ಇತರೇ ಬರಹಗಾರರಂತೆ ಬಹಳಷ್ಟು ಯುರೋಪಿನ ಸಾಹಿತ್ಯದಿಂದ ಪ್ರಭಾವಿತಳಾಗಿದ್ದಳು. ವಿಶೇಷವಾಗಿ ಕೊನೆಯ ಭಾಗದ 19 ನೆಯ ಶತಮಾನದ ರಷ್ಯನ್ ಲೇಖಕರು ಆಕೆಯ ಮೇಲೆ ಅತ್ಯಂತ ಪ್ರಭಾವ ಬೀರಿದ್ದರು. ಸಾಮಾಜಿಕ ವಸ್ತುವನ್ನೊಳಗೊಂಡ ಕಥೆಗಳನ್ನು ಬರೆದಾಗಲೂ ಸಹ, ಅವು ನೀತಿ ಹೇಳುವಂತವುಗಳಾಗಲೀ ಅಥವಾ ಬರಿಯ ರಾಜಕೀಯ ಘೋಷಣೆ ಹೇಳುವಂತಹವುಗಳಾಗಲೀ ಆಗಿರಲಿಲ್ಲ. ಸಮಾಜವಾದಿ ದೃಷ್ಟಿಕೋನ ಹೊಂದಿದ ಇಸ್ಮತ್ ಕತೆಯನ್ನು ಸಂಪ್ರದಾಯವಲ್ಲದ ತಂತ್ರದಲ್ಲಿ ಹೇಳ ಬಲ್ಲವಳಾಗಿದ್ದಳು. ಮನುಷ್ಯರ ಲೈಂಗಿಕತೆಯ ಬಗ್ಗೆ ಮುಚ್ಚು ಮರೆಯಿಲ್ಲದೇ ಪ್ರಮಾಣಿಕವಾಗಿ ಹಾಗೂ ವಿವೇಕಯುಕ್ತಳಾಗಿ ಬರೆಯ ಬಲ್ಲವಳಾಗಿದ್ದಳು. ವಸ್ತುವಿನ ಆಯ್ಕೆಯಲ್ಲಿ, ಹೇಳುವ ಧ್ವನಿಯಲ್ಲಿ ಭಿನ್ನತೆಯನ್ನು, ಸ್ಪಷ್ಟತೆಯನ್ನು ವ್ಯಕ್ತಪಡಿಸಿದ್ದ ಇಸ್ಮತ್ ಹೊಸ ಭಾಷೆ ಹಾಗೂ ಶೈಲಿಯನ್ನೂ ರೂಢಿಸಿಕೊಂಡಿದ್ದಳು. ಆಕೆಯ ಶೈಲಿಯಲ್ಲಿ ಧೈರ್ಯ, ಹೊಸತನ, ವಿರೋಧ, ಹಾಗೂ ವಾಸ್ತವತೆಗೆ ಹತ್ತಿರವಾದ ಅಭಿವ್ಯಕ್ತಿಗಳು ತುಂಬಿಕೊಂಡಿದ್ದವು.

ಇಸ್ಮತ್ ತನ್ನ ಕಾಲದ ಅನೇಕ ಮಹಿಳೆಯರಿಗೆ ಸ್ಪೂರ್ತಿ ಇತ್ತ ಲೇಖಕಿಯಾಗಿದ್ದಳು. ಅನೇಕ ಮುಸ್ಲಿಂ ಲೇಖಕಿಯರು ಇಸ್ಮತ್ ಹಾಕಿದ ದಾರಿಯಲ್ಲಿ ಹೆಜ್ಜೆ ಹಾಕಿದುದು ಕಂಡು ಬರುತ್ತದೆ. ತನಗೆ ಹೆಚ್ಚು ಪರಿಚಯವಿದ್ದುದರ ಬಗ್ಗೆ ಇಸ್ಮತ್ ಬರೆಯುತ್ತಿದ್ದಳು. ಅತ್ತೆಂದಿರು, ಚಿಕ್ಕಪ್ಪಂದಿರು, ಸಂಬಂಧಿಕರು, ಸೇವಕರು, ಅಕ್ಕ-ಪಕ್ಕದವರು- ಹೀಗೆ ಕುಟುಂಬಗಳಲ್ಲಿ ಕಂಡ ಎಲ್ಲಾ ಪಾತ್ರಗಳು ಈಕೆಯ ಸಾಹಿತ್ಯದ ವಸ್ತುವಾಗುತ್ತಾರೆ. ಇಸ್ಮತ್‌ಳ ಬಗ್ಗೆ ಬರೆಯುವ ವಿಮರ್ಶಕರು ಆಕೆಯ ಕತೆಯ ವಸ್ತುವಿನ ಆಯ್ಕೆಯಲ್ಲಿ ಮಿತಿಯನ್ನು ಗುರುತಿಸುತ್ತಾರೆ. ಆಕೆಗೆ ಪರಿಚಯವಿದ್ದುದರ ಬಗ್ಗೆ ಮಾತ್ರ ಇಸ್ಮತ್ ಬರೆಯುತ್ತಾಳೆ. ಆದರೆ ಬರೆದುದನ್ನು ಒಳ್ಳೆ ಕಲಾಕೃತಿಯಾಗಿಸುತ್ತಾಳೆ. ಆಕೆಯ ಬಹುತೇಕ ಬರಹ ನೇರವಾಗಿ ಹೆಂಗಸರಿಗೆ ಹಾಗೂ ಅವರ ಸ್ಥಾನ -ಮಾನಗಳಿಗೆ ಸಂಬಂಧ ಪಟ್ಟವುಗಳಾಗಿವೆ. ಹೆಣ್ಣಿನ ಮಾನಸಿಕ ಸ್ಥಿತಿಯನ್ನು, ಆಕೆಯ ಅಂತರಂಗವನ್ನು ವಿಶಿಷ್ಟವಾಗಿ ಇಸ್ಮತ್ ಚಿತ್ರಿಸುತ್ತಾಳೆ.

'ಇಸ್ಮತ್ ಚುಗ್‌ತಾಯಿ'

ಆತ್ಮ ಕತೆ

ಇಂಗ್ಲೀಷಗೆ ಅನುವಾದ
ಮುನಿಬಾ ಕಮಲ್

ಸ್ತ್ರೀ ಸ್ವಾತಂತ್ರ್ಯದ ಪ್ರತೀಕವಾದ ದಿಟ್ಟ ಹೆಣ್ಣು ಇಸ್ಮತ್ ಚುಗ್‌ತಾಯಿ ಜನಿಸಿದ್ದು 1915ರಲ್ಲಿ. ಸಂಪ್ರದಾಯಸ್ಥ ಕುಟುಂಬದಿಂದ ಬಂದಿದ್ದರೂ, ಆ ಸಂದರ್ಭದಲ್ಲಿ ಆಕೆ ಬಹುಶಃ ಉರ್ದು ಭಾಷೆಯ ನಿರ್ಭಿಡೆಯ ಲೇಖಕಿಯಾಗಿದ್ದಳು. ಲಕ್ನೋದ ಪ್ರಗತಿಪರ ಲೇಖಕಿಯರ ಆಂದೋಲನದಲ್ಲಿ ಕ್ಲುಪ್ತವಾಗಿ ತನ್ನನ್ನು ತೊಡಗಿಸಿಕೊಂಡಿದ್ದಳು. ತೀವ್ರ ವ್ಯಕ್ತಿವಾದಿ ಹಾಗೂ ಪ್ರತಿಮಾ ಭಂಜಕಳಾಗಿದ್ದ ಈಕೆಯ ಕೊಡುಗೆ ಉತ್ಕೃಷ್ಠವಾದುದು. ಕತೆ ಹೇಳುವುದರಲ್ಲಿ ನಿಸ್ಸೀಮಳಾದ ಇವಳು ಸರಳವಾಗಿ, ನಿಖರವಾಗಿ ಹಾಗೂ ಆಘಾತಕರವಾಗಿ ಬರೆಯುತ್ತಿದ್ದಳು. ಆಕೆಯ ನಿಷ್ಕಪಟತೆ ಆಕೆಯ ಕತೆಗಳಿಂದ ಹಿಡಿದು ಈ ಲೇಖನದವರೆಗೂ ವಿಸ್ತರಿಸಿದೆ. ಇಲ್ಲಿ ಸಾಂಪ್ರದಾಯಕ ಸಾಮಾಜಿಕ ಕಟ್ಟು ಪಾಡುಗಳಲ್ಲಿದ್ದೂ ಕೂಡಾ ಸಂಪ್ರದಾಯಗಳ ಮೇಲೆ ಸವಾರಿ ಮಾಡಿ, ತನ್ನ ಇಚ್ಛಾ ಶಕ್ತಿಯಿಂದ ತನ್ನದೇ ಅಸ್ತಿತ್ವವನ್ನು ತಾನೇ ರೂಪಿಸಿಕೊಂಡು ತಾನು ಏನಾದೆ ಎಂಬುದರ ಹಿನ್ನಲೆಯ ಘಟನೆಗಳನ್ನು ಇಲ್ಲಿ ಗುರುತಿಸುತ್ತಾಳೆ.

ನಾನು ನನ್ನ ಮೊದಲ ದೃಷ್ಟಿಯ ನೆನಪುಗಳನ್ನು ಕೆದಕಿ -ದಾಗ, ನಾನು ಚಪ್ಪಾಳೆ ಹೊಡೆಯುತ್ತಾ ಸುತ್ತುತ್ತಿದ್ದ ಕೆಂಪು ಕನ್ನಡಿಗಳಿಂದ ಕಂಗೊಳಿಸುವ ದುಂಡಾಕಾರದ ಕೋಣೆ ನನ್ನ ಕಣ್ಣ ಮುಂದೆ ಸುತ್ತುತ್ತದೆ. ಆ ಗಾಜಿನ ಕೊಠಡಿ ನನ್ನ ತಾಯಿಯ ಗರ್ಭ. ಇಂದಿಗೂ ಸಹ ಅನೇಕ ವೇಳೆ ಆಕೆಯ ಗರ್ಭವನ್ನು ಈ ಕೊಠಡಿಯ ತರಹವೇ ನಾನು ನೋಡುತ್ತೇನೆ. ನಂತರ ಅಲ್ಲೊಂದು ಪರಿಧಿ, ಮಧ್ಯದಲ್ಲಿ ಸಾಲಂಕೃತಳಾಗಿ ನಿಂತ ನನ್ನ ಸುತ್ತ ಜನರು ವೃತ್ತಾಕಾರದಲ್ಲಿ ಸುತ್ತುತ್ತಿರುವುದು ನನಗೆ ಜ್ಞಾಪಕವಾಗುತ್ತದೆ. ನನ್ನ ಚಿಕ್ಕಪ್ಪನ ಮದುವೆಯಲ್ಲಿ ನಾನು ನರ್ತಿಸುತ್ತಿರುವುದನ್ನು ನೆನಪಿಸಿಕೊಳ್ಳುತ್ತೇನೆ. ಜನರೆಲ್ಲ ಸುತ್ತ ನಿಂತಿದ್ದಾರೆ, ಆದಾಗ್ಯೂ ಅವರು ಸುತ್ತುತ್ತಿರುವಂತೆ ಕಾಣಿಸುತ್ತದೆ. ಇಂದಿಗೂ ಸಹ ನಾನು ಸ್ಥಬ್ದಳಾಗಿ ನಿಂತಾಗ ಅವರು ಚಲಿಸುತ್ತಿದ್ದರು ಎನ್ನುವ ಭಾವನೆ ನನ್ನಲ್ಲಿದೆ.

ನಮ್ಮ ಮನೆಯಲ್ಲೊಂದು ಬಿಳಿಯ ಹೆಣ್ಣು ಕುದುರೆ ಮರಿ ಇತ್ತು. ನನ್ನೆಲ್ಲ ಸಹೋದರರು ಒಬ್ಬರ ನಂತರ ಒಬ್ಬರು ಅದರ ಮೇಲೆ ಸವಾರಿ ಹೋಗುತ್ತಿದ್ದರು. ಕಾಸ್ತಾರ ಅವರನ್ನು ಹೊರಗೆ ಕರೆದು ಕೊಂಡು ಸವಾರಿ ಹೋಗುತ್ತಿದ್ದನು. ಅಸೂಯೆ ಕಣ್ಣುಗಳಿಂದ ಅವರನ್ನು ನೋಡುತ್ತಿದ್ದ ನಾನು ಉದ್ದೇಶಪೂರ್ವಕ ಸಿಡುಕುತನದಿಂದ ಆ ಹೆಣ್ಣು ಕುದುರೆಯ ಮೇಲೆ ನನ್ನನ್ನು ಕೂರಿಸಿ ಒಮ್ಮೆ ಕರೆದುಕೊಂಡು ಹೋಗುವಂತೆ ಬೇಡುತ್ತಿದ್ದೆ. ಆದರೆ ನನ್ನ ತಾಯಿ ಅದನ್ನು ಕೇಳಿಸಿಕೊಳ್ಳುತ್ತಿರಲಿಲ್ಲ. (ಹೆಣ್ಣು ಮಕ್ಕಳು ಕುದುರೆ ಸವಾರಿ ಮಾಡುವಂತಿಲ್ಲ). "ನೀನು ಆ ಕುದುರೆಯ ಮೇಲೆ ಏರಿದರೆ ನಿನ್ನ ಕಾಲುಗಳನ್ನು ಮುರಿಯುತ್ತೇನೆ," ಆಕೆ ಎಚ್ಚರಿಕೆ ಇತ್ತಿದ್ದಳು. ನನ್ನ ಯಾವೊಬ್ಬ ಸಹೋದರ ಬಿಳಿಯ ಕುದುರೆಯನ್ನು ಹೆಮ್ಮೆಯಿಂದ ಏರುವುದನ್ನು ನೋಡಿದಾಗಲೆಲ್ಲಾ ನನಗೆ ಜೋರಾಗಿ ಕಣ್ಣೀರು ಉಕ್ಕಿ ಬರುತ್ತಿತ್ತು.

ಒಮ್ಮೆ ನಾನು ಹೀಗೆಯೇ ಕುದುರೆಯನ್ನು ಹಿಂಬಾಲಿಸಿ ಅಳುತ್ತಾ ಇದ್ದೆ. ನನ್ನೊಬ್ಬ ಸಹೋದರ ಕುದುರೆಯ ಮೇಲೆ ಹೆಮ್ಮೆಯಿಂದ ಬೀಗುತ್ತಿದ್ದ. ಆ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯದಿಂದ ನನ್ನ ತಂದೆ ಮರಳಿ ಬಂದರು.

'ಅವಳೇಕೆ ಅಳುತ್ತಿದ್ದಾಳೆ?' ಕಾಸ್ತಾರನನ್ನು ಕೇಳಿದರು. 'ಆಕೆ ಕುದುರೆಯ ಮೇಲೆ ಕುಳಿತುಕೊಳ್ಳಬೇಕಂತೆ', ಕಾಸ್ತರ ಉತ್ತರಿಸಿದನು.

'ಸರಿ, ನೀನೇಕೆ ಕುದುರೆ ಏರಲು ಆಕೆಗೆ ಬಿಡುತ್ತಿಲ್ಲ',? ಅಪ್ಪ ಪ್ರಶ್ನಿಸಿದರು. 'ಸಾರ್, ಮೇಡಂನವರ ಅನುಮತಿ ಇಲ್ಲ' ಕಾಸ್ತಾರ್ ವಿವರಿಸಿದ.

'ಅವಳನ್ನು ಹತ್ತಿಸು', ಅಪ್ಪ ಹೇಳಿದರು.

ಇಷ್ಟಾದ ನಂತರ ನಾನು ಪ್ರತಿ ದಿನ ನಮ್ಮ ಬಿಳಿಯ ಕುದುರೆಯ ಮೇಲೆ ಕೂರುತ್ತಿದ್ದೆ. ಕೂತಾಗ ನನಗೆ ವಿಜಯೋತ್ಸವದ ಹೆಮ್ಮೆಯಾಗುತ್ತಿತ್ತು. ಅದೇ ಬಂಡಾಯಗಾರ್ತಿ ಇಸ್ಮತಳ ಮೊದಲ ಗೆಲುವಾಗಿತ್ತು ಕೂಡಾ. ನಂತರದಲ್ಲಿ ಬಂದೂಕು ಗುರಿ ಸಾಧನೆಗೆ ನನ್ನ ಸಹೋದರರನ್ನು ಕರೆದೊಯ್ದಾಗ ಅಪ್ಪ ನನ್ನ ಕೈಯಲ್ಲಿ ಬಂದೂಕು ಇಟ್ಟು ಗುರಿ ಇಡುವುದನ್ನು, ಹಾಗೂ ಗುಂಡು ಹಾರಿಸುವುದನ್ನೂ ಸಹ ಕಲಿಸುತ್ತಿದ್ದರು.

ನನ್ನ ತಾಯಿ-ತಂದೆಗಳಿಗೆ ನಾನು ಹತ್ತನೆಯ ಮಗು. ನನ್ನ ಜನನದ ನಂತರ, ನನ್ನ ಅಮ್ಮ ಮಕ್ಕಳ ಮೇಲಿನ ಆಸಕ್ತಿಯನ್ನೇ ಕಳೆದುಕೊಂಡಳು. ನನ್ನ ಅಜ್ಜಿ ಹಾಗೂ ನನ್ನ ಹಿರಿಯ ಅಕ್ಕ ನನ್ನನ್ನು ನೋಡಿಕೊಂಡದ್ದು ನನಗೆ ನೆನಪಿದೆ. ನಂತರ ಎರಡು-ಮೂರು ವರ್ಷಗಳಲ್ಲಿ ನನ್ನ ಅಜ್ಜಿ ಅಗಲಿದರು. ಅಜ್ಜಿಯು ಒಂದು ಪಕ್ಕಕ್ಕೆ ಮುಖ ಮಾಡಿ ಕೂಡುವ ಭಂಗಿ ನನಗೆ ನೆನಪಿದೆ. ಆಕೆಯ ಹಸಿರು ಛಾಯಾರೂಪ ನನ್ನ ಕಣ್ಣಿಗೆ ಕಟ್ಟಿದಂತಿದೆ. ನನ್ನ ಅಕ್ಕ ಬಾಜಿ ನನ್ನನ್ನು ಜತನದಿಂದ ನೋಡಿಕೊಳ್ಳುತ್ತಿದ್ದಳು. ನನ್ನನ್ನು ಆವರಿಸಿದ ಆಕೆಯ ಕಾಲುಗಳ ಮಧ್ಯೆ ನಾನು ಹಾಯಾಗಿರುತ್ತಿದ್ದೆ.

ನನ್ನಮ್ಮ ನನ್ನನ್ನು ದ್ವೇಷಿಸಿರುವ ಸಾಧ್ಯತೆ ಕೂಡಾ ಇದೆ. ಎರಡು ವರ್ಷಕ್ಕೊಂದರಂತೆ ಆಕೆ ಹೆರುತ್ತಿದ್ದಳು. ಆ ದಿನಗಳಲ್ಲಿ ಅದರ ಓಡಾಟದ ಸಮಯದಲ್ಲಿಯೇ ಕುಟುಂಬ ಯೋಜನೆಗೆ ಸಹಾಯ ಮಾಡುತ್ತಿದ್ದ ಮಂಗ ದೇವರ ಆಶೀರ್ವಾದವಾಗಿತ್ತು. ನನ್ನ ಅಮ್ಮ ಗರ್ಭವತಿಯಾಗಿದ್ದಾಗ ಇದು ನಡೆದದ್ದು. ಮರದ ಕೆಳಗೆ ತನ್ನ ಬಸಿರ ಹೊಟ್ಟೆಯ ಮೇಲೆ ಕಾಳುಗಳ ಬಟ್ಟಲೊಂದನ್ನು ಇಟ್ಟುಕೊಂಡು ಆಕೆ ಕಾಳುಗಳನ್ನು ಕುಟುಕುತ್ತಿದ್ದಳು. ಮರದ ಕೊಂಬೆಯ ಮೇಲೆ ಕುಳಿತ ದಡೂತಿ ಮಂಗಕ್ಕೂ ಕಾಳಿನ ಮೇಲೆ ಆಸೆಯಾಗಿರಬೇಕು. ಅಷ್ಟು ಎತ್ತರದಿಂದ ಅದು ಅಮ್ಮನ ಹೊಟ್ಟೆಯಮೇಲೆ ನೆಗೆಯಿತು. ಅಮ್ಮನಿಗೆ ಗರ್ಭಪಾತವಾಯಿತು, ಆಕೆ ಮತ್ತೆಂದೂ ಗರ್ಭ ಧರಿಸಲಿಲ್ಲ.

ಬಾಜಿಗೆ ಮದುವೆಯಾದಾಗ ನನಗೆ ನಾಲ್ಕು ವರ್ಷ. ಎತ್ತರವಾಗಿ, ಸಣಕಲಾಗಿದ್ದ, ಶೋಭಿತ ಹೂವಿನ ಹಾರಗಳನ್ನು ಧರಿಸಿದವನೊಬ್ಬ ಅವಳನ್ನು ಕರೆದುಕೊಂಡು ಹೋಗಿಬಿಟ್ಟ. ಆ ಹೂವಿನ ಹಾರಗಳನ್ನು ಎಳೆದು ಹರಿದು ಬಿಡಬೇಕೆನಿಸಿತ್ತು ನನಗೆ. ಅವನೊಬ್ಬ S.H.O. ಅಂತೆ. ಮನೆಯಲ್ಲಿ ಎಲ್ಲರೂ ನನ್ನನ್ನು, 'ಬಾಜಿಯ ಕಾಲುಂಗುರ ಕಾಳಿದ್ದ ಹಾಗಿತ್ತು, ಹಾಗೂ ಪೋಲೀಸಿನವನೊಬ್ಬ ಆಕೆಯನ್ನು ಎಳೆದುಕೊಂಡು ಹೋದರು', ಎಂದು ರೇಗಿಸುತ್ತಿದ್ದರು.

ಮದುವೆಯ ಬಾಜಾ ಬಜಂತ್ರಿಗಳ ಗದ್ದಲದಲ್ಲಿ ನನ್ನ ಅಳು ಅಡಗಿ ಹೋಯಿತು. ಬಾಜಿ ಮನೆ ಬಿಟ್ಟು ಹೋದಳು. ಈ ಮದುವೆ ಗದ್ದಲದಲ್ಲಿ ಒಂದು ಮಗುವಿನ ಆಕ್ರಂದನ ಕೇಳುವವರ್‍ಯಾರು? ಆ ದಿನಗಳಲ್ಲಿ ಕಣ್ಣೀರು ತುಂಬಿಕೊಂಡ ಸಣ್ಣ ಹುಡುಗಿಯೋರ್ವಳು ಕಗ್ಗತ್ತಲ ನಿರ್ಜನ ರಸ್ತೆಯಲ್ಲಿ ಹೋಗುತ್ತಿದ್ದುದನ್ನು ನಾನು ಹಲವಾರು ಬಾರಿ ಕನಸು ಕಂಡಿದ್ದೆ ಅವಳು ನಾನೇ ಆಗಿದ್ದೆ.

ನನ್ನ ಹಾಗೂ ನನ್ನ ಇತರೇ ಸಹೋದರಿಯರ ನಡುವೆ ತುಂಬಾ ದೊಡ್ಡ ಕಂದರವಿತ್ತು. ಮೂಲೆಯೊಂದರಲ್ಲಿ ಗುಂಪು ಕಟ್ಟಿಕೊಳ್ಳುತ್ತಿದ್ದ ಅವರು ತಮ್ಮ ತಮ್ಮ ಮದುವೆಯಾಗು-ವವನ ಬಗ್ಗೆ ಹರಟೆ ಹೊಡೆಯುತ್ತಿದ್ದರು. ನಾನು ಅವರಲ್ಲಿಗೆ ಹೋದರೆ, ಅವರು ನನ್ನನ್ನು ಅಲ್ಲಿಂದ ಓಡಿಸಿ ಬಿಡುತ್ತಿದ್ದರು. ನನ್ನ ಸೋದರರು ತಮ್ಮದೇ ಆದ ಆಟ, ಸಂತೋಷಗಳಲ್ಲಿ ಮುಳುಗಿರುತ್ತಿದ್ದರು. ನಾನು ಒಬ್ಬಂಟಿ ಹಾಗೂ ಸ್ವತಂತ್ರಳಾಗಿದ್ದೆ. ಅವರವರ ಗುಂಪುಗಳ ಪರಿಧಿಯೊಳಗೆ ನಾನು ಪ್ರವೇಶಿಸುವುದನ್ನು ಯಾರೂ ಕೂಡಾ ಸಹಿಸುತ್ತಿರಲಿಲ್ಲ.

ಬೇರೆಯವರ ಜೊತೆ ಸೇರಿ ಅಕ್ಕಂದಿರ ತರಹ ಅರ್ಥಹೀನ ತಲೆಹರಟೆ ಮಾಡುವುದಕ್ಕಿಂತ ಪೇರಳೆ ಮರವೇನ್ನೇರುವುದೇ ವಾಸಿ ಎಂಬ ಅರಿವು ನಿಧಾನವಾಗಿ ನನಗಾಗ ತೊಡಗಿತು. ಅಡಿಗೆ ಮಾಡುತ್ತಿರುವ ಸೇವಕರ ತಲೆ ತಿನ್ನುವುದಕ್ಕಿಂತ ಕೋತಿಯಾಟ ನೋಡುವುದು ಆಸಕ್ತಿದಾಯಕವೆನಿಸುತ್ತಿತ್ತು. ವಧುವಿನ ಉಡುಗೆಗಳಿಗೆ ಹೊಸ ಹೊಸತನ್ನು ಸೇರಿಸುವುದಕ್ಕೆ ಮೆದುಳು ಕೆಡಿಸಿಕೊಳ್ಳುವುದಕ್ಕಿಂತ ಕೋಳೀ ಮರಿಗಳ ಹಿಂದೆ ಓಡುವುದೇ ಚಂದವೆನಿಸುತ್ತಿತ್ತು. ನಾನು ಯಾವಾಗಲೂ ಬೇರೆಯ ದಾರಿಯನ್ನೇ ಆಯ್ದುಕೊಂಡಿದ್ದೇನೆ. ಹಾಗೂ ಇಂದು ಅದೇ ದಾರಿಯಲ್ಲಿ ನಡೆಯುವುದನ್ನು ಮುಂದುವರಿ-ಸಿದ್ದೇನೆ. ನಾನು ಹೇಗೆ ಬೆಳೆಯುತ್ತಿದ್ದೇನೆ ಎಂಬುದರ ಬಗ್ಗೆ ನನ್ನ ಮನೆಯಲ್ಲಿ ತಲೆ ಕೆಡಿಸಿಕೊಳ್ಳುವವರಾರಿದ್ದರು? ನನ್ನ ಅಣ್ಣಂದಿರ ಜೊತೆ ಹುಡುಗರು ಆಡುವ ಎಲ್ಲಾ ಆಟಗಳನ್ನು ನಾನು ಆಡುತ್ತಿದ್ದೆ. ಗಿಲ್ಲಿ-ದಾಂಡು ಆಡುತ್ತಾ, ಗಾಳಿಪಟ ಹಾರಿಸತ್ತಾ, ಕಾಲಲ್ಲಿ ಚೆಂಡು ಒದೆಯುತ್ತಾ ನಾನು ಹನ್ನೆರಡು ವರ್ಷದವಳಾದೆ. ಅಷ್ಟರಲ್ಲಿ ಪಠಿಸುವುದರ ಬಗ್ಗೆ ಎಂದರೆ ನಾನು ಕುರಾನ್ ಓದುವುದನ್ನು ಮುಗಿಸಿದ್ದೆ. ನನ್ನನ್ನು ಅಭಿನಂದಿಸುವ ಬದಲು ಇತರರೆಲ್ಲರೂ, "ಅವಳು ಕುರಾನನ್ನು ಎಷ್ಟೊಂದು ನಿಧಾನಕ್ಕೆ ಓದಿ ಮುಗಿಸಿದ್ದಾಳೆ ನೋಡಿ, ಆಕೆಯ ಅಕ್ಕನ ಮಗಳಿಗೆ 5 ವರ್ಷ. ಆಕೆ ಈಗಾಗಲೇ ಕುರಾನ್ ಓದಿ ಮುಗಿಸಿದ್ದಾಳೆ. ಹಾಗೂ ಹೊಲಿಯುವುದನ್ನು ಕಲಿತಿದ್ದಾಳೆ" ಎಂದು ವ್ಯಂಗ್ಯವಾಡಿದರು. ಆಕೆ ವಿಧವೆಯಾದ ನನ್ನ ಪ್ರೀತಿಯ ಅಕ್ಕನ ಮಗಳು. ಮನೆಗೆ ಬಂದ ಒಂದು ಟೆಲಿಗ್ರಾಂ

ಮನೆಯಲ್ಲಿ ಉಂಟುಮಾಡಿದ ಕೋಲಾಹಲ ನನಗಿನ್ನೂ ಜ್ಞಾಪಕವಿದೆ ನನ್ನ ಭಾವ ಮರಣ ಹೊಂದಿದ್ದರು. ಬಾಜಿ ಮನೆಗೆ ವಾಪಸ್ಸು ಬರುತ್ತಾಳೆನ್ನುವ ಕಲ್ಪನೆ ಮತ್ತು ಸಂಭ್ರಮ ನನಗೆ. ಮತ್ತೆಂದೂ ನಾನು ಚಿಕ್ಕ ಹುಡುಗಿ ಒಂಟಿಯಾಗಿ ಕತ್ತಲ ದಾರಿಯಲ್ಲಿ ನಡೆಯುತ್ತಾ ಇರುವ ಕನಸು ಕಾಣಬೇಕಾ-ಗಿದ್ದಿಲ್ಲ. ಆದರೆ ತೀರಿಕೊಂಡ ಭಾವ ಬಾಜಿಯ ಗಂಡನಾಗಿರದೆ ಮತ್ತೊಬ್ಬ ಅಕ್ಕನ ಗಂಡನಾಗಿದ್ದ. ಸರಿ, ದೇವರಿಗೆ ಎಂದಾದರೂ ನನ್ನ ಮೇಲೆ ಆಸಕ್ತಿ ಇತ್ತೇ?

ನನಗೆ ಹನ್ನೆರಡು ವರ್ಷ ತುಂಬಿತು. ನನ್ನ ಅಮ್ಮ ಒಂದು ಹಳೆಯ ಬಟ್ಟೆಯನ್ನು ಹುಡುಕಿ ತೆಗೆದು ಅದರ ಮೇಲೆ ಹೆಣಿಗೆ ಮಾಡುವಂತೆ ಹೇಳಿದಳು. 'ನಿನ್ನ ಕೈಗಳು ಇದರಿಂದ ಪಳಗುತ್ತವೆ' ಎನ್ನುತ್ತಾ ಸೂಜಿ ದಾರವನ್ನು ನನ್ನ ಕೈಯಲ್ಲಿ ಇಟ್ಟಳು. ನಾನು ಹೊಲಿಯುವುದನ್ನು ಗಮನಿಸುತ್ತಿದ್ದಳು. ನನಗೆ ಉಸಿರು ಕಟ್ಟಿದ ಹಾಗಾಗುತ್ತಿತ್ತು. ಕೋಳಿ ಮರಿಗಳ ಹಿಂದೆ ಓಡುತ್ತಿದ್ದ, ಮರಗಳನ್ನೇರುತ್ತಿದ್ದ ನನ್ನ ಸಹೋದರರನ್ನು ನೋಡಿದಾಗ ನನ್ನ ಕೈಗೆ ಸೂಜಿ ಚುಚ್ಚಿಕೊಳ್ಳುತ್ತಿತ್ತು, ಹಾಗೂ ರಕ್ತ ಒಸರುತ್ತಿತ್ತು. ಅದೃಷ್ಟವಶಾತ್ ನನ್ನಮ್ಮನಿಗೆ ಮನೆಗೆಲಸ ಹೆಚ್ಚಿತ್ತು. ಯಾರಾದರೂ ಆಕೆಯನ್ನು ಕರೆದಾಗ ನಾನು ಮುಗಿಸಿರದಿದ್ದ ಕಸೂತಿ ಕೆಲಸವನ್ನು ಶೆಲ್ಫ್ ಮೇಲಿದ್ದ ರಗ್ಗುಗಳ ಮಡಿಕೆಗಳಲ್ಲಿ ತೂರಿಸುತ್ತಿದ್ದೆ. ಚಳಿಗಾಲ ಬಂದಾಗ, ರಗ್ಗುಗಳನ್ನು ಬಿಚ್ಚಿದಾಗ, ನನ್ನ ಕಸೂತಿ ಕೆಲಸ ಕೆಳಗೆ ಉರುಳಿ ಬೀಳುತ್ತಿತ್ತು.

ನಂತರ ಅಮ್ಮ ನನಗೆ ಅಡುಗೆ ಮಾಡುವುದು ಕಲಿಸಿಕೊಡಲು ಸಿದ್ಧಳಾದಳು.

'ನಾನು ಕಲಿಯುವುದಿಲ್ಲ' ಹಟದಿಂದ ಹೇಳಿದೆ.

'ಏಕೆ'? ಅಮ್ಮ ಕೇಳಿದಳು.

'ಶಹನಾಜ್ ಭಾಯಿ ಏಕೆ ಅಡುಗೆ ಮಾಡುವುದನ್ನು ಕಲಿಯುವುದಿಲ್ಲ'?

ಮರು-ಪ್ರಶ್ನೆ ಕೇಳಿದೆ.

"ಅವನ ಹೆಂಡತಿ ಬಂದಾಗ ಅವಳು ಅವನಿಗೋಸ್ಕರ ಅಡಿಗೆ ಮಾಡುತ್ತಾಳೆ"

-- ಅಮ್ಮ ಉತ್ತರಿಸಿದಳು.

"ಅವಳು ಓಡಿ ಹೋದರೆ, ಅಥವಾ ಸತ್ತರೆ ಆಗ ಅಡಿಗೆ ಮಾಡುವವರು ಯಾರು?"

ನಾನು ಪಟ್ಟು ಹಿಡಿದು ಕೇಳಿದೆ.

ತನ್ನ ಹೆಂಡತಿ ಓಡಿ ಹೋಗುತ್ತಾಳೆಂಬುದನ್ನು ಕೇಳಿ ಶಹನಾಜ್ ಭಾಯಿಯ ಕಣ್ಣಲ್ಲಿ ನೀರು ತುಂಬಿಕೊಂಡಿತು. ಅದೇ ಸಮಯಕ್ಕೆ ಅಪ್ಪ ಕೊಠಡಿಯೊಳಕ್ಕೆ ಬಂದರು.

"ಇಸ್ಮತ್, ಹೆಂಗಸರು ಅಡಿಗೆ ಮಾಡುತ್ತಾರೆ ನಿನ್ನ ಅತ್ತೆಯ ಮನೆಗೆ ಹೋದಾಗ ನೀನು ಅವರಿಗೇನು ಬಡಿಸುತ್ತಿ"? ನಡೆದುದೆಲ್ಲವ ಕೇಳಿ ಅಪ್ಪ ಮೃದುವಾಗಿ ಪ್ರಶ್ನಿಸಿದರು.

"ನನ್ನ ಗಂಡ ಬಡವನಾಗಿದ್ದರೆ ನಾವು ಕಿಚಡಿಯನ್ನು ಮಾಡಿ ಉಣ್ಣುತ್ತೇವೆ, ಶ್ರೀಮಂತನಾಗಿದ್ದಲ್ಲಿ ಒಬ್ಬ ಅಡಿಗೆಯವನನ್ನು ನೇಮಿಸಿಕೊಳ್ಳುತ್ತೇವೆ" - ನಾನು ಉತ್ತರಿಸಿದೆ.

ತನ್ನ ಮಗಳು ಭಯಂಕರಳೆಂದು ತಂದೆಗೆ ಅರಿವಾಗಿರ-ಬೇಕು, ತಾನೇನೂ ಮಾಡಲಾರೆ ಎಂಬುದು ಅತನಿಗೆ ಅರಿವಾಗಿರಬೇಕು.

"ಹಾಗಿದ್ದರೆ ನೀನೇನು ಮಾಡಬೇಕೆಂದಿರುವೆ?" ಅಪ್ಪ ಕೇಳಿದರು.

"ಅಣ್ಣಂದಿರೆಲ್ಲ ಓದುತ್ತಾರೆ, ನಾನೂ ಸಹ ಓದುತ್ತೇನೆ" ನಾನು ಹೇಳಿದೆ.

ನನಗೆ ಪಾಠ ಹೇಳುವ ಕೆಲಸವನ್ನು ನನ್ನ ಚಿಕ್ಕಪ್ಪನಿಗೆ ವಹಿಸಲಾಯಿತು. ಒಂದು ತಿಂಗಳು ನಿರಂತರವಾಗಿ, ಅಭ್ಯಾಸ ಮಾಡಿದ ಮೇಲೆ ಅಲ್ಲಿಯದೇ ಒಂದು ಸ್ಕೂಲಿನಲ್ಲಿ ನಾಲ್ಕನೇ ತರಗತಿಗೆ ನನ್ನನ್ನು ಸೇರಿಸಿಕೊಳ್ಳಲಾಯಿತು. ಆಮೇಲೆ ನನಗೆ ಡಬಲ್ ಪ್ರಮೋಶನ್ ಕೊಟ್ಟು ಆರನೆಯ ತರಗತಿಗೆ ಸೇರಿಸಿಕೊಂಡರು. ನಾನು ಸ್ವತಂತ್ರವಾಗಿರಬೇಕೆಂದಿದ್ದೆ, ಹಾಗೂ ಶಿಕ್ಷಣವಿಲ್ಲದೇ ಒಂದು ಹೆಣ್ಣು ಸ್ವತಂತ್ರ-ವಾಗಿರುವುದು ಅಸಾಧ್ಯ. ಅವಿದ್ಯಾವಂತ-ಹೆಂಡತಿಯರನ್ನು ಅವರ ಗಂಡಂದಿರು 'ಮೂರ್ಖರು', 'ನಿರಕ್ಷರಕುಕ್ಷಿ'ಗಳು ಎಂದು ಮೂದಲಿಸುತ್ತಾರೆ. ಗಂಡ ಕೆಲಸಕ್ಕೆ ಹೋದಾದ ಮೇಲೆ ಹೆಂಡತಿ ಮನೆಯಲ್ಲಿ ಕುಳಿತು ಅವನು ಬರುವುದನ್ನು ಎದುರು ನೋಡುತ್ತಾಳೆ. ಏನಾದರಾಗಲೀ ನಾನು ಯಾರಿಂದಲೂ ಬಂಧನಕ್ಕೊಳಗಾಗಬಾರದು ಎಂದು ನಾನು ನಿರ್ಧರಿಸಿದೆ. ನನಗೆ ಸಾಧ್ಯವಿದ್ದಷ್ಟು ಬೇಗ ನಾನು ಕಲಿತು ಬಿಡಬೇಕೆಂದು ಕೂಡಾ ನಿರ್ಧರಿಸಿದೆ.

ಮದುವೆಯಾಗಲು ನನಗೆ ಇಷ್ಟವಿರಲಿಲ್ಲ. ನಮ್ಮ ಪಕ್ಕದ ಮನೆಯ ಒಬ್ಬ ಹುಡುಗನ ಬಗ್ಗೆ ನನಗೆ ಆಸಕ್ತಿ ಮೂಡಿತ್ತು. ನನಗಾಗ ಹನ್ನೆರೆಡು ಅಥವಾ ಹದಿಮೂರು ವರುಷ. ಈ ವಯಸ್ಸಿನಲ್ಲಿಯೇ ಹುಡುಗಿಯರ ಎದೆಯಲ್ಲಿ ಪ್ರೀತಿ ಮೊಳೆಯಲಾರಂಭಿಸುತ್ತದೆ. ಆ ತರುಣನಿಗೆ ಬಹುಶಃ ಆಗ ಇಪ್ಪತ್ತಾರುವರುಷವಿರ ಬಹುದು. ನಮ್ಮ ಬಂಗಲೆಯ ಪಕ್ಕವೇ ಅವನ ವಾಸ, ಅವನು ಪ್ರತಿ ದಿನ ಮುಂಜಾನೆ ಕುದುರೆ ಸವಾರಿ ಹೋಗುತ್ತಿದ್ದ. ಕುಳಿತುಕೊಂಡು ಅವನು ಕುದುರೆ ಸವಾರಿ ಹೋಗುವುದನ್ನು ನೋಡುವುದು ನನ್ನ ನಿತ್ಯದ ರೂಢಿಯಾಗಿತ್ತು. ಈ ಪುಟ್ಟ ಹುಡುಗಿ ತನಗೆ ಮಾರು ಹೋಗಿದ್ದಾಳೆಂದು ಅವನು ಎಂದೂ ಆಲೋಚಿಸಿರಲಾರ. ಅವನು ಸುಂದರ ಕಾಯದವನಾಗಿದ್ದ. ಆದರೆ ಅವನು ನನ್ನ ಕಡೆ ಯಾಕೆ ನೋಡಿಯಾನು? ತನ್ನ ಕಣ್ಣುಗಳನ್ನು ತನ್ನದೆ, ವಯಸ್ಸಿನ ತರುಣಿಯೊಬ್ಬಳ ಮೇಲೆ ಆತ ಹಾಕಿದ್ದಿರ ಬಹುದು. ಕುದುರೆಯ ಮೇಲೆ ಕುಳಿತು ಸಾಗುತ್ತಿದ್ದುದನ್ನು ನಾನು ನೋಡುತ್ತಿದ್ದೆ ಅಷ್ಟೇ. *30 ವರ್ಷದ ನಂತರ ಶಾಹಿದ್* ಲತೀಫ್‌ನ ಚಿತ್ರದ ಸೆಟ್‌ನಲ್ಲಿ ಆತನನ್ನು ಭೇಟಿಯಾದೆ. ನನ್ನನ್ನು ಗುರುತಿಸಿದ ಆತ ನನ್ನನ್ನು ಅಪ್ಪಿಕೊಂಡ. 'ಓಹ್ ಸ್ಕ್ಯಾಂಡ್ರಲ್' ನನ್ನ ಜೀವದ ಜೀವ ತಳಮಳಿಸಿತು. "ಈಗೇನು ಪ್ರಯೋಜನ, ಮೂವತ್ತು ವರುಷಗಳ ಹಿಂದೆ ನೀನು ನನ್ನನ್ನು ಗಮನಿಸಲೇ ಇಲ್ಲ. ಹದಿಮೂರು ವರುಷಗಳಲ್ಲಿ ನನ್ನಲ್ಲಿ ತುಂಬಿದ್ದ ಪ್ರೇಮವನ್ನು ನಿನಗಾಗಿ ಧಾರೆಯೆರೆಯಲು ಹಾತೊರೆಯುತ್ತಿದ್ದೆ. ಇಂದಿಗೂ ಅಷ್ಟೆ ನನ್ನ ಬಾಲ್ಯದ ಈ ರಾಜಕುಮಾರನ ನೆನಪುಗಳು ನನ್ನನ್ನು ರೋಮಾಂಚನಗೊಳಿಸುತ್ತವೆ, ನನ್ನ ಯೌವ್ವನದ ಆರ್ದ್ರತೆಯನ್ನು ಆರಿಸಿಬಿಟ್ಟ ಮೂರ್ಖ ಆತ!

ನನ್ನ ಶಾಲೆಯಲ್ಲಿ ಗಮನ ಸೆಳೆಯುವಂತಹ ಕೆಲವು ಹುಡುಗರೂ ಇದ್ದರು, ಆದರೆ ಅವರ ಆಕರ್ಷಣೆ ನನ್ನಲ್ಲಿ ಬಹಳ ದಿನ ನಿಲ್ಲಲಿಲ್ಲ. ಲಕ್ಷಣವಾಗಿ ಹಾಗೂ ಬುದ್ಧಿವಂತರಾಗಿರುವ ಹುಡುಗರೆಂದರೆ ಹುಡುಗಿಯರು ಮೂರ್ಛೆ ಹೋಗುತ್ತಿದ್ದರು. ಸೊಣಕಲು, ಪ್ರೇತ ಕಳೆ ಇರುವವರು, ಸೊಟ್ಟ-ಪಟ್ಟ ನಡೆಯುವ ಹುಡುಗರು ಹುಡುಗಿಯರ ಹಿಂದೆ ಬೀಳುತ್ತಿದ್ದರು. ಅವರಲ್ಲೊಬ್ಬ ಕ್ರಿಶ್ಚಿಯನ್ ಹುಡುಗ ಸುಂದರನಾಗಿದ್ದು, ಆಕರ್ಷಣೆಯ ಕೇಂದ್ರವಾಗಿದ್ದ. ನಾನು ಕೂಡಾ ಅವನೊಡನೆ ಸ್ನೇಹದಿಂದ ಇದ್ದೆ. ಎಲ್ಲ ಹುಡುಗಿಯರು ಅವನ ಮನೆಗೆ ಹೋಗಿ ಕೇಕ್ ಹಾಗೂ ತಿಂಡಿಗಳನ್ನು ತಿಂದು ಬರುತ್ತಿದ್ದರು. ಆ ಕಾಲದಲ್ಲಿ ನಮ್ಮ ಕಾಲೇಜಿನಲ್ಲಿ ಕೇವಲ ವಿದ್ಯಾರ್ಥಿನಿಯರು ಮಾತ್ರ ಇದ್ದರು. ಮೌಲಾನಾ, ಆಜಾದ್, ನೆಹರೂಜಿ, ಅಥವಾ ವಿಜಯಲಕ್ಷ್ಮಿ ಪಂಡಿತ್ ಅಂತಹ ನಾಯಕರು ಬಂದಾಗ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಭಾಷಣ ಮಾಡುತ್ತಿದ್ದರು. ನಾವೂ ಕೂಡಾ ಅವರ ಭಾಷಣ ಕೇಳಲು ವಿದ್ಯಾರ್ಥಿಗಳ ವಿಶ್ವವಿದ್ಯಾನಿಲಯಕ್ಕೆ ಹೋಗುತ್ತಿದ್ದೆವು. ಹುಡುಗರು ಸಭಾಂಗಣದಲ್ಲಿರುವ ಬೆಂಚುಗಳ ಮೇಲೆ ಸಭ್ಯರಂತೆ ಕುಳಿತು ಕೊಂಡಿರುತ್ತಿದ್ದರು. ಬೀದಿಗೆ ಬಂದ ಕ್ಷಣ ಅವರು ರೌಡಿಗಳಂತೆ ವರ್ತಿಸುತ್ತಿದ್ದರು. ವಿಶ್ವವಿದ್ಯಾನಿಲಯದ ಕಟ್ಟಡದ ಎದುರಿಗಿದ್ದ ರೈಲ್ವೇ ಹಳಿಗಳ ಪಕ್ಕ ನಡೆಯುತ್ತಾ ಅವರು ಬಾಯಿಗೆ ಬಂದಂತೆ ಬಯ್ಯುವುದು, ಅರ್ಥವಿಲ್ಲದೇ ನಗುವುದು, ಒಬ್ಬರ ಮೇಲೊಬ್ಬರು ಬೀಳುತ್ತಾ ನಡೆಯುವುದು. ಹುಡುಗಿಯರು ಅಧೋವದನರಾಗಿ ದಾರಿ -ಯುದ್ದಕ್ಕೂ ಕಣ್ಣುಗಳನ್ನು ನೆಲಕ್ಕೆ ನೆಟ್ಟು ಹಾಸ್ಟೆಲ್ ಸೇರುತ್ತಿದ್ದರು. ಈ ನಾಟಕಗಳು ನನ್ನನ್ನು ಕ್ಷೋಭೆಗೊಳ ಪಡಿಸುತ್ತಿದ್ದವು.

ಹುಡುಗಿಯರು ಮಾತನಾಡುವುದರಿಂದ ಹುಡುಗರಿಗೆ ಅಮಲೇರುವುದೆಂದು ನಮ್ಮ ಉಪಾಧ್ಯಾಯರು ತಿಳಿದಿದ್ದರು. ನಾನು ಹುಡುಗಿಯರಿಗೆ ಹೇಳುತ್ತಿದ್ದೆ, "ಅವರು ನಮ್ಮೊಂದಿಗೆ ಸ್ನೇಹ ಬಯಸುತ್ತಾರೆ. ಅವರೇನೂ ನಮ್ಮನ್ನು ತಿಂದು ಬಿಡುವುದಿಲ್ಲ. ನಾವೇಕೆ ಅವರೊಂದಿಗೆ ಸ್ನೇಹ ಬೆಳೆಸ ಬಾರದು"? ಆದರೆ ಇದಕ್ಕೆ ಯಾವುದೇ ಹುಡುಗಿ ಸಿದ್ಧಳಿರಲಿಲ್ಲ.

ಒಂದು ದಿನ ಕ್ಲಾಸ್ ಮುಗಿದ ಮೇಲೆ ಯಥಾಪ್ರಕಾರ ರೈಲ್ವೆ ಹಳಿಯ ಒಂದು ಬದಿ ಹುಡುಗರು, ಇನ್ನೊಂದು ಬದಿ ಹುಡುಗಿಯರು ಹೋಗುತ್ತಿದ್ದೆವು. ಇದ್ದಕ್ಕಿದ್ದಂತೆ ಹುಡುಗನೊಬ್ಬ ಎರಡು ಸಾಲಿನ ಹಾಡೊಂದನ್ನು ಜೋರಾಗಿ ಹಾಡಿದ. ತಡೆಯಲಾರದೇ ನಾನು ಅವನನ್ನು ಕೇಳಿದೆ:

"ಅದು ಜಿಗಾರ್‌ನ ದ್ವಿಪದಿಯಲ್ಲವೇ"?

ಧ್ವನಿ ಎಲ್ಲಿಂದ ಬಂತೆಂದು ಹುಡುಗ ಎಡಕ್ಕೆ-ಬಲಕ್ಕೆ, ಆ ಕಡೆ-ಈ ಕಡೆ ನೋಡಿದ. ಅದು ಒಬ್ಬ ಹೆಣ್ಣು ಮಗಳು ಬರೆದದ್ದೆಂದು ಕೇಳಿ ಆತ ಅವಾಕ್ಕಾಗಿ ಹೋದ. ನಾನು ಮತ್ತೆ ಪ್ರಶ್ನಿಸಿದೆ.

'ನನಗೆ ಗೊತ್ತಿಲ್ಲ', ಅವನು ತೊದಲಿದ.

"ಕತ್ತಲಲ್ಲೇಕೆ ಬಾಣ ಬಿಡುತ್ತಿರುವೆಯೋ; ಈ ದ್ವಿಪದಿಯನ್ನು ಬರೆದಿರುವವರು ದಾಗ್" ಎಂದೆ. ಮತ್ತೆ ಹುಡುಗಿಯರ ಕಡೆ ತಿರುಗಿ ಹೇಳಿದೆ "ನೋಡಿದಿರಾ ಹುಡುಗರು ನನ್ನನ್ನು ತಿಂದು ಬಿಡಲಿಲ್ಲವಲ್ಲ, ನಾನು ಇನ್ನೂ ಜೀವಂತ ಇದ್ದೇನೆ".

ಈ ಘಟನೆಯ ನಂತರ ಕೆಲವು ಹುಡುಗರ ಜೊತೆ ಸ್ನೇಹ ಬೆಳೆಯಿತು. ಪುಸ್ತಕಗಳು ಮತ್ತು ಕವಿತೆಗಳ ಬಗ್ಗೆ ಮಾತಾಡುತ್ತಿದ್ದೆವು. ಮೂರು ನಾಲ್ಕು ಧೈರ್ಯಶಾಲಿ ಹುಡುಗಿಯರು ಹುಡುಗರಿಂದ ನಮಗೆಲ್ಲಾ ಚಹಾ ಕೊಡಿಸುತ್ತಿದ್ದರು. ಏನನ್ನು ಆರ್ಡರ್ ಮಾಡಬೇಕೆಂದು ಹುಡುಗರು ಬರುವ ಮೊದಲೇ ಇವರಿಗೆ ತಿಳಿದಿರುತ್ತಿತ್ತು. ಸಾಮಾನ್ಯವಾಗಿ ಸೋಡ, ಸಮೋಸ, ಆಲೂಗಡ್ಡೆ ಕಟ್ಲೆಟ್‌ಗಳನ್ನು ತಿರುತಿರುಗಿ ಕೇಳುತ್ತಿದ್ದೆವು. ಹುಡುಗರು ತಮ್ಮ ಮನೆಗಳಿಂದ ತರುತ್ತಿದ್ದ ಮಾವಿನ ಹಣ್ಣುಗಳು, ಸಿಹಿತಿಂಡಿಗಳನ್ನೆಲ್ಲಾ ನಾವೆಲ್ಲಾ ಹಂಚಿಕೊಳ್ಳುತ್ತಿದ್ದೆವು: ಉಪಾಧ್ಯಾಯರಾರಿಗಾದರೂ ಬೇಜಾರಾದರೆ ಅವರಿಗೂ ಒಂದೊಂದು ಮಾವಿನ ಹಣ್ಣು ಸಿಗುತ್ತಿತ್ತು.

ಒಮ್ಮೆ ರಜಾದಿನಗಳಲ್ಲಿ ರೈಲಿನಲ್ಲಿ ಮನೆಯ ಕಡೆ ಹೊರಟೆವು. ಹುಡುಗರೂ ಅದೇ ರೈಲಿನಲ್ಲಿ ಇದ್ದರು. ರೈಲು ಯಾವುದೇ ಊರಿನಲ್ಲಿ ನಿಂತಾಗ ಹುಡುಗರು ನಮ್ಮ ಬೋಗಿಯ ಹತ್ತಿರ ಬಂದು ನಿಂತು ಬಿಡುತ್ತಿದ್ದರು. ಹೊರಗಡೆ ಮಾರುತ್ತಿದ್ದ ಬಾಯಲ್ಲಿ ನೀರೂರಿಸುತ್ತಿದ್ದ ತಿಂಡಿಗಳನ್ನು ನೋಡಿ ಹುಡುಗಿಯರಿಗೆ ಆಸೆಯಾಗುತ್ತಿತ್ತು. ಆದರೆ ಭಯದಿಂದ ಕೆಳಗೆ ಇಳಿಯುತ್ತಿರಲಿಲ್ಲ. ಆಸಗಂಗಳಿಂದ ಹೊರಗಡೆ ನೋಡುತ್ತಿದ್ದರು ಮಾತ್ರ. ಇಳಿದು ಹೋಗಿ ಕೊಂಡುಕೊಳ್ಳುವ ಎದೆಗಾರಿಕೆ ಯಾರಿಗೂ ಇರಲಿಲ್ಲ. ನನಗೋ ನೀರಡಿಕೆಯಿಂದ ಪ್ರಾಣ ಹೋಗುತ್ತಿತ್ತು. ನಮ್ಮ ಮುಂದಿನ ಪ್ರಯಾಣ ತುಂಬಾ ಸುಖಕರವಾಗಿರುವುದಿಲ್ಲ -ವೆಂದು ನನಗೆ ಗೊತ್ತಿತ್ತು. ಮುಂದಿನ ಸ್ಟೇಶನ್ನಿನಲ್ಲಿ ಪ್ಲಾಟ್‌ಫಾರಂನಲ್ಲಿ ಒಬ್ಬ ಹುಡುಗನಿಗೆ ಕೂಗಿ ಹೇಳಿದೆ. "ಹೇ ಒಂದು ಸೆಕೆಂಡ್ ಇಲ್ಲಿ ಬಾ".

ಅವನಿಗೆ ಅರ್ಥವಾಗಲಿಲ್ಲ ನಾನು ಸನ್ನೆ ಮಾಡಿದೆ.

ಬೆದರುತ್ತಾ ಕಿಟಕಿಯ ಹತ್ತಿರ ಬಂದ.

"ಒಂದು ಸೋಡಾ ತಂದು ಕೊಡುತ್ತೀಯಾ"? ನಾನು ಕೇಳಿದೆ.

"ಅಫ್‌ಕೋರ್ಸ್" ಅವನು ಹೇಳಿದ.

ಕಣ್ಣು ಮುಚ್ಚಿ ತೆಗೆಯುವುದರೊಳಗೆ ಸೋಡಾ ಬಾಟಲ್ ನನ್ನ ಕೈಯಲ್ಲಿತ್ತು. ಅವನಿಗೆ ಹಣ ಕೊಟ್ಟೆ. ಅವನು ನಿರಾಕರಿಸಿದ.

"ನನ್ನ ಸೋಡಾಗೆ ನೀನು ದುಡ್ಡು ಕೊಡಬೇಕೆಂದು ನಾನೇಕೆ ಅಂದುಕೊಳ್ಳಲಿ. ನನಗೆ ಸೋಡ ತಂದುಕೊಟ್ಟು ಬೇರೆ ನನಗೆ ಉಪಕಾರ ಮಾಡಿದ್ದಿ" ದುಡ್ಡನ್ನು ಕೊಡುತ್ತಾ ಹೇಳಿದೆ.

ರೈಲು ಹೊರಟಿತು. ಹುಡುಗನ ಹತ್ತಿರ ಸೋಡ ತರಿಸಿದ್ದಕ್ಕಾಗಿ ಉಪಾಧ್ಯಾಯಿನಿ ನನ್ನ ಮೇಲೆ ರೇಗಾಡಿದರು.

"ಮತ್ತೆ ಆತನು ಬಂದರೆ ಅವನಿಂದ ನಾನು ತಿಂಡಿಯನ್ನೂ ತರಿಸುತ್ತೇನೆ. ಅವನ ಹತ್ತಿರ ಬರೀ ಮಾತಾಡಿದ್ದೇನೆ ಅಷ್ಟೆ. ಅದರಲ್ಲೇನು ತಪ್ಪಿದೆ? ಮುಂದಿನ ಸ್ಟೇಷನ್ನಿನಲ್ಲಿ ನಿಮಗೂ ಒಂದು ಸೋಡ ತರಿಸಿ ಕೊಡುತ್ತೇನೆ" ನಾನು ಮಾರುತ್ತರಿಸಿದೆ.

ಉಪಾಧ್ಯಾಯಿನಿ ಕರಗಲಿಲ್ಲ. ಮುಂದಿನ ಸ್ಟೇಷನ್ನಿನಲ್ಲಿ ಹುಡುಗರು ಮತ್ತೆ ಬಂದರು. ಪ್ರತಿ ಪ್ಲಾಟ್‌ಫಾರಂನಲ್ಲೂ ನಾವು ಹುಡುಗರಿಂದ ಏನನ್ನಾದರೂ ತರಿಸಿಕೊಳ್ಳುತ್ತಿದ್ದೆವು. ನಮ್ಮಲ್ಲಿ ಸಂಕೋಚ ಕಡಿಮೆಯಾಯಿತು. ಮುಂದಿನ ಪ್ರಯಾಣ ಆಹ್ಲಾದಕರವಾಗಿತ್ತು.

ಮಗುವಾಗಿದ್ದಾಗ ನಾನು ನಿದ್ದೆಯಲ್ಲಿ ನಡೆಯುತ್ತಿದ್ದೆ. ಹತ್ತು ಹನ್ನೆರಡು ವರ್ಷಗಳಾದರೂ ಇದು ನಡೆದೇ ಇತ್ತು. ಒಮ್ಮೆ ನಾನೆ ಅಗಳಿಯನ್ನೆತ್ತಿ ಬಾಗಿಲನ್ನು ತೆಗೆದುಕೊಂಡು ತೋಟದೊಳಕ್ಕೆ ಹೋದೆ. ಎಚ್ಚರವಾದಾಗ ನಾನೊಂದು ಮರದ ಕೆಳಗೆ ನಿಂತಿದ್ದೆ. ಆ ಮರವನ್ನು ಭೂತದ ಮರ ಎಂದು ಕರೆಯುತ್ತಿದ್ದರು. ಪ್ರೇತವಾಗಲಿ ಅಥವಾ ಅಂತಹದೇ ಯಾವುದೂ ನನಗೆ ಕಂಡಿರಲಿಲ್ಲ. ಆದರೆ ಅದು ನನ್ನೊಳಗೆ ಸೇರಿಕೊಂಡಿದೆಯೆಂದು ಅಮ್ಮ ನಂಬಿದ್ದಳು. ಅಮ್ಮ ಯಾವುದೋ ಪೂಜಾ ಮಂದಿರಕ್ಕೆ ಹೋಗಿ, ದೇವರಿಗೆ ಹರಕೆ ಸಲ್ಲಿಸಿ ಅಲ್ಲಿಂದ ಒಂದು ಬೆತ್ತವನ್ನು ತಂದಳು. ಅದರಿಂದ ನನ್ನ ತಲೆಯ ಮೇಲೆ ಬಾರಿಸಿ ನನ್ನಲ್ಲಿದ್ದ ಪಿಶಾಚಿಯನ್ನು ಓಡಿಸಲು ಪ್ರಯತ್ನಿಸಿದಳು. ಆದರೆ ಪಿಶಾಚಿ ನನ್ನಲ್ಲಿದ್ದರೆ ತಾನೇ? ನನ್ನಲ್ಲಿ ಸೇರುವುದಕ್ಕಿಂತ ಬೇರೆ ಒಳ್ಳೆಯ ಕೆಲಸಗಳಿವೆಯೆಂದು ಪ್ರೇತಗಳಿಗೂ ಗೊತ್ತು.

ಒಂಭತ್ತನೆಯ ತರಗತಿಯಲ್ಲಿದ್ದಾಗ ನನಗೆ ಮದುವೆಯ ಪ್ರಸ್ತಾಪಗಳು ಬರಲಾರಂಭಿಸಿದ್ದವು. ನಮ್ಮಮ್ಮನಂತೂ ತನ್ನ ಕಿರಿಮಗಳ ಕೈಯನ್ನು ಒಬ್ಬ ಡೆಪ್ಯುಟಿ ಕಲೆಕ್ಟರ್‌ಗೆ ಕೊಡುವು-ದೆಂದು ತೀರ್ಮಾನಿಸಿಯೇ ಬಿಟ್ಟಳು. ದರ್ಜಿಗಳು ಮತ್ತು ಚಿನಿವಾರರು ಮನೆಗೆ ಬಂದುಕುಳಿತು ಬಿಟ್ಟರು. ಸ್ಕೂಲಿನಿಂದ ಬಂದ ನಾನು ಅವರನ್ನು ನೋಡಿದೆ, ಅನುಮಾನ ಬಂದಿತು. ಮದುವೆಯಾಗದ ಅಕ್ಕಂದಿರಾರೂ ಮನೆಯಲ್ಲಿ ಉಳಿದಿರಲಿಲ್ಲ. ಈ ಗಲಾಟೆ ಯಾಕಿರಬಹುದು ? ಸ್ವಲ್ಪ ಹೊತ್ತಿನಲ್ಲಿಯೇ ಈ ವ್ಯವಸ್ಥೆಗಳೆಲ್ಲಾ ನನ್ನ ಮದುವೆಗೆಂದು ಗೊತ್ತಾಯಿತು. ನಾನು ವ್ಯಾಕುಲಳಾದೆ.

"ನಾನು ಮದುವೆಯಾಗುವುದಿಲ್ಲ. ಓದುತ್ತೇನೆ". ರಭಸದಿಂದ ತಂದೆತಾಯಿಗಳಿಗೆ ಹೇಳಿದೆ.

"ಇವಳಿಗೆ ಹುಚ್ಚು ಹಿಡಿದಿದೆ" ಅಮ್ಮ ತೀರ್ಮಾನ ಕೊಟ್ಟಳು.

"ಯಾರು ಬೇಡ ಅಂದರು ನಿನಗೆ ? ಅತ್ತೆಯ ಮನೆಯಲ್ಲಿದ್ದು ಕೊಂಡು ಓದಬಹುದಲ್ಲಾ" ಅಪ್ಪ ವಿವರಿಸಿದರು.

"ಓಹ ಗಂಡನ ಮನೆಯಲ್ಲಿ ಎಲ್ಲರೂ ಓದಿದ ಹಾಗೇ" ನಾನು ಯೋಚಿಸಿದೆ ಮತ್ತು ಹೇಳಿದೆ, "ಕನಿಷ್ಟ ಅವನೇನಾದರೂ ನಮ್ಮ ಅಪ್ಪನ ಹಾಗಿದ್ದರೆ ಏನು ಮಾಡಲಿ? ವರ್ಷಕ್ಕೊಂದು ಮಗು ಹೆರಲೋ ಅಥವಾ ಪರೀಕ್ಷೆಗೆ ಕೂಡಲೋ?"

ತುಂಬಾ ಆಲೋಚನೆ ಮಾಡಿದೆ. ನನಗೊಂದು ಉತ್ತರ ಹೊಳೆಯಿತು. ನನ್ನ ಚಿಕ್ಕಪ್ಪನ ಮಗನೇ ಇದಕ್ಕೆ ಸರಿ. ಮುಂಬಯಿಯಲ್ಲಿ ಅವನು ಮೆಡಿಸನ್ ಓದುತ್ತಿದ್ದ. ಅವನಿಗೊಂದು ಪತ್ರ ಬರೆದೆ.

" ಈ ಸಮಸ್ಯೆಯಿಂದ ನನ್ನನ್ನೂ ನೀನೊಬ್ಬ ಮಾತ್ರ ಪಾರುಗೊಳಿಸಬಲ್ಲೆ. ನೀನು ಏನೂ ಮಾಡ ಬೇಕಿಲ್ಲ. ನಮ್ಮಪ್ಪನಿಗೆ ಪತ್ರ ಬರೆದು ನೀನು ನನ್ನನ್ನು ಇಷ್ಟ ಪಡುವುದಾಗಿಯೂ ಮತ್ತು ಮದುವೆಯಾಗುವುದಾಗಿಯೂ ತಿಳಿಸು. ಇದರಿಂದ ಮಾತ್ರ ನನ್ನ ಈ ಮದುವೆಯ ಪ್ರಸ್ತಾಪ ನಿಲ್ಲುತ್ತದೆ. ಕುರಾನ್ ಅಲ್ಲಾ ಮೇಲಾಣೆ. ನಾನು ನಿನ್ನನ್ನು ಮದುವೆಯಾಗುವುದಿಲ್ಲ. ಇದೊಂದು ಒಳ್ಳೆಯ ಕೆಲಸವನ್ನು ದೇವರ ಹೆಸರಿನಲ್ಲಿ ಮಾಡಿಬಿಡು. ಈ ಮದುವೆಯಾಗು-ವುದನ್ನು ದಯವಿಟ್ಟು ನಿಲ್ಲಿಸು".

ಚಿಕ್ಕಪ್ಪನ ಮಗ ನನ್ನ ತಂತ್ರದ ಪ್ರಕಾರ ನಡೆದುಕೊಂಡ. ನಂತರ ಒಂದು ದಿನ ನಮ್ಮ ಅಮ್ಮ ಬಣ್ಣ ಹೊಡೆಯುವವನ ಜೊತೆಯಲ್ಲಿ ಚೌಕಾಶಿ ಮಾಡುತ್ತಿದ್ದಳು. ಧಿಡೀರನೆ ನನ್ನ ಚಿಕ್ಕಪ್ಪ ಅವಸರದಿಂದ ಪ್ರತ್ಯಕ್ಷನಾದ.

"ಶೌಕತ್ ಇಸ್ಮತಳನ್ನು ಇಷ್ಟ ಪಟ್ಟಿದ್ದಾನೆ. ನೀನು ಅವಳನ್ನು ಹೊರಗಡೆಯವರಿಗೆ ಕೊಡಲಾರೆ ಈ ಪತ್ರವನ್ನು ಓದು" ಚಿಕ್ಕಪ್ಪ ಬಡಬಡಿಸಿದ.

ನಮ್ಮಮ್ಮನ ಮುಖ ಮೊರದಷ್ಟು ಅಗಲವಾಯಿತು. ಟೈಲರ್ ಅರ್ಧಂಬರ್ಧ ಹೊಲಿದ ಬಟ್ಟೆಗಳನ್ನು ಬಿಟ್ಟು ಹೋದ. ಹಾಗೇ ಚಿನಿವಾರನೂ ಕರಗಿಸಿದ್ದ ಚಿನ್ನವನ್ನು ಬಿಟ್ಟು ಹೋದ. ಆಗಿಯೇ ಹೋಗಬೇಕಿದ್ದ ನನ್ನ ಮದುವೆಗೆ ಒಂದು ತಡೆ ಬಿತ್ತು, ಅನಿರ್ದಿಷ್ಟ ಕಾಲದವರೆಗೆ.

ನಾನು ಚಿಕ್ಕವಳಿದ್ದಾಗ ಪರದೆಗಳಿಂದ ಅಲಂಕೃತವಾಗಿದ್ದ ಜೀರ್ಣವಾಗಿ ಹೋಗಿದ್ದ ಒಂದು ಹಳೇ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ನಮ್ಮ ಮೇಲುಸ್ತುವಾರಿಗೆ ಒಬ್ಬ ಹೆಂಗಸನ್ನು ನೇಮಿಸಲಾಗಿತ್ತು. ಕಿಟಕಿಯಲ್ಲಿ ನಾವು ಇಣುಕಿದಾಗಲೆಲ್ಲಾ ಅವಳು ನಮ್ಮನ್ನು ಬಯ್ಯುತ್ತಿದ್ದಳು. ನನ್ನ ಮೆಟ್ರಿಕ್ ಮುಗಿಸುವವರೆಗೆ ನಾನು ಅಲಿಘಢ್‌ನಲ್ಲಿದ್ದೆ. ನಂತರ ಲಕ್ನೋವಿಗೆ ಹೋಗಿ ಅಲ್ಲಿನ ವಿಶ್ವವಿದ್ಯಾಲಯ-ದಲ್ಲಿದ್ದೆ.

ಚಿಕ್ಕಂದಿನಲ್ಲಿ ಸಾರೋಟಿನಲ್ಲಿ ಯಾವಾಗಲೂ ಅಮ್ಮನೊಂದಿಗೇ ಹೋಗುತ್ತಿದ್ದೆ. ಆಗಿನ ದಿನಗಳಲ್ಲಿ ಸಾರೋಟುಗಳಿಗೆ ಪರದೆ ಹಾಕಲಾಗುತ್ತಿತ್ತು. ಶಾಲೆಯಲ್ಲಿ-ದ್ದಾಗಲೇ ನನಗೆ ಬುರ್ಖಾ ಹಾಕಲು ಹೇಳಿದರು. ಓ ಈಗ ನನಗೆ ನೆನಪಾಗುತ್ತಿದೆ. ಒಮ್ಮೆ ನಾವು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದೆವು. ನಮ್ಮ ಸ್ಟೇಷನ್ ತಲುಪುವವರೆಗೆ ಹೆಂಗಸರೆಲ್ಲಾ ತಮ್ಮ ಬುರ್ಖಾ ತಮ್ಮ ಪಕ್ಕಕ್ಕೆ ಇಟ್ಟು ಕೊಂಡಿದರು. ರೈಲಿನಿಂದ ಇಳಿಯುತ್ತಿದ್ದ ಹಾಗೇ ನಾನೂ ಬುರ್ಖಾ ಹಾಕಿಕೊಳ್ಳ ಬೇಕೆಂದು ನನಗೆ ಗೊತ್ತಿತ್ತು. ಆಳುಗಳು ಹಾಸಿಗೆಗಳನ್ನು ಕಟ್ಟಿ ಹೊರಗಿಟ್ಟರು. ನಾನು ನನ್ನ ಬುರ್ಖಾನನ್ನು ಒಂದು ಹಾಸಿಗೆಯಲ್ಲಿ ಅವಿತಿಟ್ಟೆ. ಕ್ಷಣ ಮಾತ್ರದಲ್ಲಿ ನನ್ನನ್ನು ಫಾಸಿ ಗೊಳಿಸುತ್ತಿದ್ದ ಆ ಕಪ್ಪು ಬಟ್ಟೆ ಎರಡು ಹಾಸಿಗೆಗಳ ನಡುವೆ ಅಂತರ್ಧಾನವಾಯಿತು. ಟ್ರೈನು ನಿಂತಿತು. ಏನೂ ತಿಳಿಯದವಳ ಹಾಗೆ ನಾನು ನನ್ನ ಬುರ್ಖಾ

ಹುಡುಕತೊಡಗಿದೆ. "ಅದು ಎಲ್ಲಿ ಹೋಗಿರಲು ಸಾಧ್ಯ"? ಎಲ್ಲರೂ ಕೇಳಿದರು.

"ಕತ್ತೆ, ರೈಲಿನಿಂದ ಆಚೆ ಎಸೆದಿಲ್ಲ ತಾನೇ" ಅಮ್ಮ ಉದ್ಗರಿಸಿದಳು

"ಬೆನ್ನಿನ ಮೇಲೆ ಎರಡು ಪೆಟ್ಟು ಬಿದ್ದ ಮೇಲೆ, ತುಂಬಾ ಜ್ಞಾಪಿಸಿಕೊಳ್ಳುವಂತೆ ನಟಿಸುತ್ತಾ" ಅದು ಯಾವುದೋ ಹಾಸಿಗೆಯಲ್ಲಿ ಸೇರಿಕೊಂಡಿರಬೇಕು. ತಲೆದಿಂಬಿನ ಕೆಳಗೆ ಇಟ್ಟಿದ್ದು ನನಗೆ ಜ್ಞಾಪಕವಿದೆ".

ಈಗೇನೂ ಮಾಡುವ ಹಾಗಿರಲಿಲ್ಲ. ಎರಡು ತಾಸುಗಳು ಶ್ರಮದಿಂದ ಹಾಸಿಗೆಗಳನ್ನೆಲ್ಲಾ ಸೇರಿಸಿ ಕಟ್ಟಿದ್ದರು. ಬಿಚ್ಚಲು ಒಂದು ತಾಸಾದರೂ ಬೇಕು. ರೈಲಿನಿಂದ ಹೊರಟಾಗ ನನ್ನ ತಲೆಯ ಮೇಲೆ ಬುರ್ಖಾ ಇರಲಿಲ್ಲ. ವಯಸ್ಕಳಾದ ನಂತರ ಬುರ್ಖಾ ಇಲ್ಲದೇ ನಡೆದುದು ಇದೇ ಮೊದಲ ಬಾರಿಯಾಗಿತ್ತು.

ಅಪ್ಪ ನನ್ನನ್ನು ಒಮ್ಮೆ ಕೇಳಿದರು. "ಸ್ಕೂಲಿನಲ್ಲಿ ತಲೆಯನ್ನು ಮುಚ್ಚಿಕೊಳ್ಳುತ್ತಿಯಾ (ಬುರ್ಖಾ ಹಾಕಿಕೊಳ್ಳುತ್ತೀಯಾ"?

"ಇಲ್ಲ ತಲೆಯನ್ನು ಮುಚ್ಚಿಕೊಂಡರೆ ನನಗೆ ಮೂರ್ಖಳ ಹಾಗೆ ಭಾಸವಾಗುತ್ತದೆ" ಅಪ್ಪ ಆಶ್ಚರ್ಯದಿಂದ ಅಸಂತೋಷ ವ್ಯಕ್ತಪಡಿಸಿದರು.

ಬುರ್ಖಾವನ್ನು ನಾನು ಸಂಪೂರ್ಣವಾಗಿ ಬಿಟ್ಟೆ. ನನ್ನ ಮುಖವನ್ನು ಮುಚ್ಚಿಕೊಳ್ಳುವುದು ತೀರಾ ಅನಿವಾರ್ಯ-ವಾದಾಗ ಯಾರಾದರೂ ವಯಸ್ಸಾದ ಹೆಂಗಸರ ಹತ್ತಿರ ತೆಗೆದುಕೊಳ್ಳುತ್ತಿದ್ದೆ. ನನ್ನ ಅಪ್ಪ ನಿವೃತ್ತಿ ಹೊಂದಿ ಲಕ್ನೋಗೆ ಬರುವ ಹೊತ್ತಿಗೆ ಇಲ್ಲಿ ಎಲ್ಲಾ ಹೆಂಗಸರೂ ಬುರ್ಖಾವನ್ನು ಬಿಟ್ಟುಬಿಡುವ ಹಾಗಾಗಿತ್ತು. ಏನಾಯಿತೆಂದರೆ ಜೋಧಪುರ-ದಲ್ಲಿ ಹಿಂದೂ ಹೆಂಗಸರು ಖದ್ದರ್‌ನ್ನು ಧರಿಸಿಕೊಳ್ಳುತ್ತಿ-ದ್ದರು. ರೌಡಿಗಳೆಲ್ಲಾ ಹಳ್ಳಿಯ ಜಗುಲಿಯ ಮೇಲೆ ಕುಳಿತು ಅವರ ಮೇಲೆ ಕಣ್ಣಿಟ್ಟಿದ್ದರು. ಹೆಂಗಸರನ್ನು ಹಿಂಬಾಲಿಸಿ ಅವರು ಇರುವ ತಾಣಗಳ ಬಗ್ಗೆ ತಿಳಿದುಕೊಂಡಿದ್ದರು. ನೆಲೆಯಲ್ಲಿ ಬಂದು ದೊಡ್ಡಗಲಾಟೆಯೇ ನಡೆದು ಹೋಯಿತು. ಒಬ್ಬ ಮುಸ್ಲಿಂ ಹೆಂಗಸು ಹಿಂದೂ ಹೆಂಗಸರ ಹಾಗೆ ಖದ್ದರ್ ಧರಿಸಿದ್ದಳೆಂದು ಎಲ್ಲರೂ ನಂಬಿದ್ದರು. ಹಿಂದೂ ಹಾಗೂ ಮುಸ್ಲಿಂ ಹೆಂಗಸರ ನಡುವಣ ವ್ಯತ್ಯಾಸ ಯಾರಿಗೂ ತಿಳಿಯುತ್ತಿರಲಿಲ್ಲ. ಮುಸ್ಲಿಂ ಮಹಿಳೆಯರನ್ನು ಗುರುತಿಸುವುದೇ ಅವರು ಧರಿಸುವ ಬುರ್ಖಾದಿಂದ ಆಗಿತ್ತು. ಈ ಘಟನೆಯ ನಂತರ ನಮ್ಮ ಮನೆಯಲ್ಲಿ ಎಲ್ಲರೂ ಬುರ್ಖಾ ಧರಿಸುವುದನ್ನು ನಿಲ್ಲಿಸಿದರು. ಕಾಲೇಜ್ ಮೆಟ್ಟಿಲು ಏರುವ ಹೊತ್ತಿಗೆ ನಾನು ಸಂಪೂರ್ಣವಾಗಿ ಬುರ್ಖಾ ಸಹವಾಸದಿಂದ ಹೊರ ಬಂದಿದ್ದೆ, ವಿಶ್ವವಿದ್ಯಾನಿಲಯಕ್ಕೆ ಹೋಗುವಾಗ ಮಾತ್ರ ಯಾರನ್ನಾದರೂ ಕೇಳಿ ಬುರ್ಖಾ ತೆಗೆದುಕೊಂಡು ಹೋಗುತ್ತಿದ್ದೆ. ನಂತರದಲ್ಲಿ ಖಾದಿ ಧರಿಸಲಾರಂಭಿಸಿದೆ.

ಗಾಂಧೀಜಿ ಲಕ್ನೋಗೆ ಭೇಟಿ ಕೊಟ್ಟ ಮೇಲೆ ಅಲ್ಲಿ ಖಾದಿ ಧರಿಸುವ ವಾಡಿಕೆ ಆರಂಭವಾಯಿತು. ನಾವು ಕೆಲವು ಹುಡುಗಿಯರು ಗಾಂಧೀಜಿಯನ್ನು ಭೇಟಿ ಮಾಡಲು ಹೋದೆವು. ಅವರ ಹಸ್ತಾಕ್ಷರವನ್ನೂ ಕೇಳಿದಾಗ ಅವರೆಂದರು "ನೀವೆಲ್ಲಾ ಖಾದಿಯನ್ನು ಧರಿಸಿ ಬನ್ನಿರಿ ಅಂದರೆ ನಿಮಗೆ ನನ್ನ ಹಸ್ತಾಕ್ಷರ ಸಿಗುತ್ತದೆ". ಅಂದೇ ಸಂಜೇ ನಾವುಗಳೆಲ್ಲಾ ಖಾದಿಯನ್ನು ಖರೀದಿಸಿದೆವು. ಮರುದಿನ ಸುಮಾರು ಮೂವತ್ತು ಹುಡುಗಿಯರು ಒರಟಾದ ಗರಿಗರಿಯಾದ ಗಂಜಿಯ ವಾಸನೆಯನ್ನು ಹೊರಹೊಮ್ಮಿಸುತ್ತಿದ್ದ ಖಾದಿ ಸೀರೆಗಳನ್ನು ಧರಿಸಿ ಗಾಂಧೀಜಿಯನ್ನು ಅಭಿನಂದಿಸಲು ಅವರ ದರ್ಬಾರಿಗೆ ಹೋದೆವು. ಗಾಂಧೀಜಿಯ ಬೊಚ್ಚು ಬಾಯಿಯ ಮುಗಳ್ನಗೆ "ನೋಡಿದಿರಾ, ಮೂವತ್ತು ಹುಡುಗಿಯರು ವಿದೇಶೀ ಬಟ್ಟೆಗಳನ್ನು ಉಡದ ಹಾಗೆ ಮಾಡಿದೆ" ಎನ್ನುವಂತಿತ್ತು. ತಮ್ಮ ಹಾಸ್ಯಮಯ ಆತ್ಮೀಯತೆಯಿಂದ ಅವರು ನಮ್ಮನ್ನು ತಮ್ಮ ಪಕ್ಕ ಕುಳ್ಳಿರಿಸಿಕೊಂಡು ಹಸ್ತಾಕ್ಷರ ನೀಡಿದರು. ನನ್ನ ಖಾದಿಯ ವ್ಯಾಮೋಹದಿಂದಾಗಿ ನಾನು ಒಮ್ಮೆ ಬಂಧಿತಳಾಗಿ ಬಿಡುತ್ತಿದ್ದೆ.

ಆಗ ನಾನು ಕೆಲಸ ಮಾಡುತ್ತಿದ್ದೆ ಹಾಗೂ ನನ್ನ ಅಮ್ಮನನ್ನು ನೋಡಲು ಜೋಧಪುರ್ ಮಾರ್ಗದಲ್ಲಿ ಪ್ರಯಾಣ ಮಾಡುತ್ತಿದ್ದೆ. ಹಗಲನ್ನು ಮೂರನೇ ದರ್ಜೆಯಲ್ಲಿ ಪಯಣಿಸಿದ ನಂತರ, ರಾತ್ರಿಯನ್ನು ಕಳೆಯಲು ಪ್ರಥಮ ದರ್ಜೆ ಕ್ಯಾಬಿನ್ನಿನಲ್ಲಿ ಟಿಕೇಟು ಕೊಂಡಿದ್ದೆ. ಖಾದಿ ಧೋತಿಯನ್ನು ಧರಿಸಿದ್ದೆ. ಜೋಧಪುರ ಇನ್ನೂ ಎರಡು ಸ್ಟೇಷನ್ನುಗಳಷ್ಟು ದೂರ ಇರುವಾಗ ಸಿಗುವ ಫುಲೇರಾದಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ ನಾಯಕರೊಬ್ಬರು ರೈಲಿನಲ್ಲಿ ಹತ್ತಿರುವರೆಂದು ಸುದ್ದಿ ಹರಡಿತು. ಆ ದಿನಗಳಲ್ಲಿ ಕಾಂಗ್ರೆಸ್ಸಿಗರನ್ನು ಜೋಧಪುರಕ್ಕೆ ಬರದಂತೆ ಬಹಿಷ್ಕರಿಸ

-ಲಾಗಿತ್ತು. ಜೋಧಪುರದ ಪ್ಲಾಟ ಫಾರಂ ಮೇಲೆ ನಾನು ಇಳಿದೆ. ನಾನು ಶುಭ್ರ ಬಿಳಿಯ ಖಾದಿ ಸೀರೆಯನ್ನು ಧರಿಸಿದ್ದೆ, ಕಣ್ಣಿಗೆ ಕನ್ನಡಕ ಮತ್ತು ಹೆಗಲಿನಿಂದ ಜೋತಾಡುತ್ತಿರುವ ಚೀಲ. ಇಳಿದ ತಕ್ಷಣ ನನ್ನನ್ನು ಸ್ವಾಗತಿಸಲು ಪೋಲೀಸರು ಸನ್ನದ್ಧರಾಗಿ ನಿಂತಿದ್ದರು. ಆದರೆ ಕಾಕತಾಳೀಯ ವೆಂಬಂತೆ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ನನ್ನ ಚಿಕ್ಕಪ್ಪನೇ ಆಗಿದ್ದರು. ಕಾಂಗ್ರೆಸ್ ನಾಯಕರ ಬದಲು ನನ್ನನ್ನು ನೋಡಿ ಅವರಿಗೆ ದಿಗ್‌ಭ್ರಮೆಯಾಯಿತು.

"ಇವಳು ನನ್ನ ಅಣ್ಣನ ಮಗಳು" ಆಶ್ಚರ್ಯದಿಂದ ಉದ್ಗರಿಸಿದರು ಚಿಕ್ಕಪ್ಪ. ಮನೆ ತಲುಪುವವರೆಗೂ ಶಾಂತವಾಗಿದ್ದರು. ಮನೆ ತಲುಪಿದ ಚಿಕ್ಕಪ್ಪಾ ನನ್ನ ಕಡೆ ತಿರುಗಿ ಅಬ್ಬರಿಸಿದರು "ಥೂ ಮಾನಗೆಟ್ಟವಳೆ, ಸೌಜನ್ಯವಿಲ್ಲದವಳೆ, ಏನಿದೆಲ್ಲಾ ?"

ಏನೂ ಆಗಿಯೇ ಇಲ್ಲವೇನೋ ಎನ್ನುವ ನಿರಾತಂಕದಲ್ಲಿ ಹೇಳಿದೆ. ಏನು? ಏನಾಯಿತೀಗ ? ಕೇವಲ ಒಂದು ಖಾದಿ ಸೀರೆಯನ್ನುಟ್ಟು ಕೊಂಡಿದ್ದೇನೆ ಅಷ್ಟೆ. ನಾನೇನು ತಪ್ಪು ಮಾಡಿಲ್ಲವಲ್ಲ ? ನಾನು ಕೆಲಸದಲ್ಲಿದ್ದುದರಿಂದ, ನನ್ನನ್ನು ನಾನೇ ನೋಡಿಕೊಳ್ಳುತ್ತಿದ್ದುದರಿಂದ ನನ್ನೊಂದಿಗೆ ಯಾರು ವಾದಮಾಡಲಾಗಲಿಲ್ಲ.

ಆಗ ಜೋಧಪುರದಲ್ಲಿ ಹೆಡ್ ಮಾಸ್ತರಿಣಿಯ ಹುದ್ದೆಯೊಂದು ಖಾಲಿಯಾಯಿತು. ಆಗ ನಾನೊಬ್ಬಳೇ B.A.B.T ಪಾಸ್ ಮಾಡಿದ್ದ ಮುಸ್ಲಿಂ ಮಹಿಳೆಯಾಗಿದ್ದೆ, "ಮುಸ್ಲಿಮರಿಗೆ ತಮ್ಮ ಹಕ್ಕು ಸಿಗಬೇಕು" ಎನ್ನುವ ಘೋಷಣೆಯ ಕಾಲ ಅದು. ನನಗೆ ನನ್ನ ಹಕ್ಕೂ ಸಿಕ್ಕಿತು. ನಾನು ಸ್ಕೂಲಿನ ಹೆಡ್‌ಮಾಸ್ತರಿಣಿಯಾದೆ. ಖಾದಿಯನ್ನು ಧರಿಸಿಯೇ ನಾನು ಸ್ಕೂಲಿಗೆ ಹೋಗುತ್ತಿದ್ದೆ.

"ನೀನು ಬುರ್ಖಾ ಧರಿಸಬೇಕು" ನನ್ನ ಒಬ್ಬ ಚಿಕ್ಕಪ್ಪ ಹೇಳಿದರು.

"ತಮಾಷೆ ಮಾಡುತ್ತೀಯಾ" ಖಾದಿ ಧರಿಸಿಯೇ ಮನೆ ಬಿಡುತ್ತಿದ್ದ ನಾನು ಅವನನ್ನು ಅಣಕಿಸುತ್ತಾ ಹೇಳಿದೆ. "ಇನ್ನೊಮ್ಮೆ ಬುರ್ಖಾ ಧರಿಸು ಎಂದು ಹೇಳಿದರೆ ರಾಜೀನಾಮೆ ಕೊಡುತ್ತೇನೆ"

ನನ್ನಲ್ಲಿದ್ದ ಮೊಂಡುತನದ ಛಾಯೆಯನ್ನು ಎಲ್ಲರು ಅರಿತಿದ್ದರು. ಯಾರೂ ಏನೂ ಅನ್ನಲಿಲ್ಲ. ಮೆಟ್ರಿಕ್ ಮುಗಿದ ಮೇಲೆ ನನ್ನ ಅಪ್ಪ ನನ್ನನ್ನು ಮುಂದೆ ಓದಿಸಲು ನಿರಾಕರಿಸಿದರು. ನಾನು ಹೆದರಿಸಿದೆ.

"ನನ್ನನ್ನು ಮುಂದೆ ಓದಿಸದೇ ಇದ್ದರೆ, ಯಾವುದಾದರೂ ಮಿಷನರಿಗೆ ಹೋಗಿ ಕ್ರಿಶ್ಚಿಯನ್ನಳಾಗಿ ಬಿಡುತ್ತೇನೆ".

"ಅಲ್ಲಿಗೆ ಹೇಗೆ ಹೋಗುತ್ತಿ" ಅಪ್ಪ ಕೇಳಿದರು.

"ರೈಲು ಹಳಿಗುಂಟ ನಡೆದೇ ಹೋಗುತ್ತೇನೆ. ನನಗೆ ದಾರಿಗೊತ್ತಿದೆ. ಅವರು ನನ್ನನ್ನು ಮತಾಂತರಗೊಳಿಸುತ್ತಾರೆ ಕರೆದುಕೊಂಡು ಹೋಗಿ ಅವರ ಜಾತಿಗೆ ಸೇರಿಸುತ್ತಾರೆ". ನಾನು ಉತ್ತರಿಸಿದೆ. ಕೊನೆಗೂ ಅಪ್ಪ ನನ್ನ ಹೆಚ್ಚಿನ ಓದಿಗೆ ಖರ್ಚು ಮಾಡಲು ಒಪ್ಪಿಕೊಂಡರು. ನನ್ನ ಹೃದಯ ಹೆಚ್ಚಿನ ಓದಿಗಾಗಿ ತುಡಿಯುತ್ತಿದೆಯೆಂದೂ, ಮದುವೆಯನ್ನು ನಾನು ಇಷ್ಟಪಡುವುದಿಲ್ಲವೆಂದು ಅಪ್ಪ ಕಂಡು ಕೊಂಡರು. ಆಗ್ರಾದಲ್ಲಿ ನನ್ನ ಹೆಸರಿನಲಿ ಒಂದು ಸಣ್ಣ ಮನೆ ಕಟ್ಟಿಸಿ ಕೊಟ್ಟರು. ಆಗ ಅದು ಸುಮಾರು ಮೂರುನಾಲ್ಕು ಸಾವಿರ ಬೆಲೆ ಬಾಳುತ್ತಿತ್ತು. ಈ ಮನೆಯನ್ನು ನನ್ನಣ್ಣನಿಗೆ ನೋಡಿಕೊಳ್ಳಲು ಹೇಳಿದ್ದೆ. ಈ ಮನೆಯನ್ನು ಮಾರಿ, ಇಂಗ್ಲೆಂಡಿಗೆ ಹೋಗಿ ಇನ್ನೂ ಒಳ್ಳೆಯ ಕೆಲಸಕ್ಕೆ ಹೋಗೋಣ ಎಂದು ಆಲೋಚಿಸಿದೆ. ಆಗ್ರಾದಲ್ಲಿದ್ದ ನನ್ನಣ್ಣನ ಮನೆಗೆ ಬಂದೆ.

"ದಯವಿಟ್ಟು ನನ್ನ ಮನೆಯನ್ನು ಮಾರಲು ಸಹಾಯ ಮಾಡು. ನನಗೆ ಇಂಗ್ಲೆಂಡಿಗೆ ಹೋಗುವ ಇಚ್ಛೆಯಾಗುತ್ತಿದೆ." ನನ್ನ ಇಷ್ಟವನ್ನು ಅಣ್ಣನಲ್ಲಿ ಹೇಳಿಕೊಂಡೆ.

"ಯಾವ ಮನೆ ?" ನನ್ನಣ್ಣ ಕೇಳಿದ, "ಆ ಹೆಣ್ಣು ಕುದುರೆ ಇದ್ದ ಮನೆತಾನೇ, ನಿನ್ನ ಸಹಿಯನ್ನು ಪೋರ್ಜರಿ ಮಾಡಿ ಬಹಳ ಹಿಂದೆಯೇ ಅದನ್ನು ಮಾರಿ ಆಯಿತು. ಉಳಿದ ದುಡ್ಡು ನಿನ್ನ ಅತ್ತಿಗೆಗೆ ಒಡವೆ ಮಾಡಿಸಲು ಖರ್ಚಾಯಿತು".

"ಹಾ, ಹಾ ನನ್ನನ್ನು ಇದರಲ್ಲಿ ಎಳೆಯ ಬೇಡಿ" (ಸಿಕ್ಕಿಸ ಬೇಡ)" ಅತ್ತಿಗೆ ಹೇಳಿದಳು "ಹಣ ಎಲ್ಲಿ ಹೋಯಿತೆಂದು ನನಗೆ ಹೇಗೆ ಗೊತ್ತಾಗಬೇಕು ?".

ನಾನು ರೋಷದಿಂದ ಕೆಂಡವಾಗಿದ್ದೆ. ಹೇಳಿದೆ "ಭಾಯಿ ಜಾನ್, ನಾನು ನಿಮ್ಮ ವಿರುದ್ಧ ದಾವೆ ಹಾಕಬಹುದು"

"ಅಫಕೋರ್ಸ್, ನೀನು ಮಾಡಬಹುದು. ನಾನು ಜೈಲಿಗೂ ಹೋಗ ಬೇಕಾದೀತು. ಆದರೂ ನಿನಗೆ ಹಣ ಸಿಗಲಾರದು". ಆತ ಕೋಪದಿಂದ ಪ್ರತಿಕ್ರಿಯಿಸಿದ.

"ನೀನೊಬ್ಬ ವಕೀಲ ನಿನ್ನ ವಿರುದ್ಧ ದಾವೆ ಹೂಡುವುದು ಹೇಗೆಂದು ಸ್ವಲ್ಪ ಹೇಳು" ನಾನು ಕೇಳಿದೆ.

"ನಿನ್ನ ಕೇಸಿಗಾಗಿ ನಾನು ಹೋರಾಡಬಲ್ಲೆ. ಆದರೆ ನೀನು ಈಗ ಸ್ವಲ್ಪ ಅಡ್ವಾನ್ಸ್ ಕೊಡು" ಅಣ್ಣ ಉತ್ತರಿಸಿದ.

ಇದನ್ನು ಕೇಳಿ ಭಾಬಿ ಬೆದರಿದಳು. ಅವಳನ್ನು ಗಮನಿಸಿದೆ ಅಣ್ಣ ನನ್ನನ್ನು ಮೃದುವಾಗಿ ಕೇಳಿದ "ನಿನಗೆ ಇಂಗ್ಲೆಂಡಿಗೆ ಹೋಗಲು ನಿಜವಾಗಿಯೂ ಇಷ್ಟವಿದೆಯೇ?"

"ಹೌದು ಸತ್ಯವಾಗಿ" ನಾನು ಹೇಳಿದೆ. "ಹಾಗಿದ್ದಲ್ಲಿ ಈಜುತ್ತಾ ಹೋಗು" ಅವನು ಉತ್ತರಿಸಿದ

ಮುಂಬಯಿನಿಂದ ಸಮುದ್ರದಲ್ಲಿ ಈಜಿಕೊಂಡು ಹೋಗುವ ದಾರಿಯನ್ನು ವಿವರಿಸತೊಡಗಿದ. "ಒಂದು ಕಡೆ ಎರಡು ದಿನ ಆರಾಮ ಮಾಡು, ನಂತರ ಈಜು, ಕೆಲವೇ ದಿನಗಳಲ್ಲಿ ನೀನು ಇಂಗ್ಲೆಂಡನ್ನು ತಲುಪುತ್ತಿ"

"ಅವನ ಹೆಂಡತಿ ಈ ಸಂವಾದವನ್ನು ಗಮನವಿಟ್ಟು ಕೇಳುತ್ತಿದ್ದಳು.

"ಅವಳ ಬಟ್ಟೆಗಳು?" ಅವಳು ಕೇಳಿದಳು.

"ಅವನ್ನು ಒಂದು ತೈಲ ವಸ್ತ್ರದಲ್ಲಿ ಕಟ್ಟಿ ಅದನ್ನು ತನ್ನ ಹೊಟ್ಟೆಗೆ ಕಟ್ಟಿಕೊಂಡಲಾಯಿತು ಅಷ್ಟೆ" ಅಣ್ಣ ಉತ್ತರಿಸಿದ.

ಭಾಬಿ ಮುಖ್ಯವಾದ ಪ್ರಶ್ನೆಯೊಂದನ್ನು ಎತ್ತಿದಳು, "ಸಮುದ್ರದಲ್ಲಿ ದೊಡ್ಡ ದೊಡ್ಡ ಮೀನುಗಳಿರುತ್ತವೆ. ಇವಳನ್ನು ಬಿಡುತ್ತವೆಯೇ?"

"ಉದ್ದನೆಯ ಗಳುವೊಂದನ್ನು ಕೈಯಲ್ಲಿ ಇಟ್ಟುಕೋ, ಅದರಿಂದ ಮೀನುಗಳನ್ನು ಓಡಿಸಿದರಾಯಿತು".

ಅಣ್ಣನ ಮಗ ಕೂಡಾ ಅಲ್ಲಿಯೇ ಕುಳಿತು ಇದನ್ನು ಕೇಳುತ್ತಿದ್ದ.

"ನಾನೂ ನಿನ್ನೊಂದಿಗೆ ಬರುತ್ತೇನೆ" ಅವನು ತೊದಲಿದ.

ನಮ್ಮ ಸಂಭಾಷಣೆಯಲ್ಲಿ ಹುಡುಗನು ತಲೆ ಹಾಕುತ್ತಿದ್ದ ಹಾಗೆಯೇ ನನ್ನ ಇಂಗ್ಲೆಂಡ್ ಪ್ರವಾಸ ಅಂತ್ಯಗೊಂಡಿತು. ಹೆಜ್ಜೆ ಹೆಜ್ಜೆಗೂ ನನ್ನ ಬಾಂಧವ್ಯ ತೊಡೆಯುತ್ತಾ ಬಂದೆ. ವಿರೋಧ ಪಕ್ಷಗಳು ಹಾಹಾ ಕಾರ ಮಾಡಿದರು. ಆದರೆ ಜಯ ಯಾವಾಗಲೂ ನನ್ನದೇ ಆಗಿರುತ್ತಿತ್ತು.

ಶಾಹೀದ್ ಲತೀಫ್‌ನನ್ನು ನಾನು ಮೊದಲಬಾರಿಗೆ ಭೇಟಿಯಾಗಿದ್ದು ಆಲಿಘಢ್‌ನಲ್ಲಿ. ಆಗ ಅವನು M.A ಮಾಡುತ್ತಿದ್ದ. ನಾನೂ B.T ಓದುತ್ತಿದ್ದೆ. ಒಮ್ಮೆ ಅವನೊಂದಿಗೆ ನನ್ನ ಹೃದಯದಲ್ಲಿಯೇ ಕುಶಲೋಪರಿಯ ಭೇಟಿ ಮಾಡಿದೆ. ಆ ನಂತರ ಅವನು ಮುಂಬಯಿಗೆ ಬಂದು 225 ರೂಗಳಿಗೆ ಕತೆಗಾರನಾಗಿ ಸೇರಿಕೊಂಡಿದ್ದ. ನಾನು ಮುಂಬಯಿಗೆ ಸ್ಕೂಲ್ ಇನ್ಸ್‌ಪೆಕ್ಟರ್ ಆಗಿ ಬಂದು ನನ್ನಣ್ಣನ ಸಂಗಡ ಇರತೊಡಗಿದ ಮೇಲೆ ಮತ್ತೆ ಅವನ ಭೇಟಿಯಾಯಿತು. ಅವನು ಆಗಾಗ ನಮ್ಮ ಮನೆಗೆ ಬರತೊಡಗಿದ. ಅವನೊಟ್ಟಿಗೆ ನಾನು ಹೊರಗೆ ಹೋಗುತ್ತಿದ್ದೆ. ಜೊತೆಯಲ್ಲಿ ನಾವು ಸಿನೆಮಾ ನೋಡುತ್ತಿದ್ದೆವು. ಬೀಚಿನಲ್ಲಿ ಬರಿಗಾಲಿನಲ್ಲಿ ನಡೆಯುತ್ತಿದ್ದೆವು. ಮತ್ತು ಇತರ ಸಾಹಿತ್ಯದ ಗೆಳೆಯರನ್ನು ಭೇಟಿಯಾಗುತ್ತಿದ್ದೆವು.

ಒಂದು ಸಾರಿ ಶಾಹೀದ್ ತನ್ನ ಕತೆಗಳನ್ನು ಬಾಂಬೆ ಟಾಕೀಸಿಗೆ ಮಾರುತ್ತೇನೆಂದು ತೆಗೆದುಕೊಂಡು ಹೋದ. ಇದು ನನ್ನಣ್ಣನಿಗೆ ಯಾರಿಂದಲೋ ಗೊತ್ತಾಗಿ ಅವನು ತುಂಬಾ ಕೋಪಗೊಂಡ. ನನ್ನ ತಂಗಿ 300ರೂ ಸಂಪಾದನೆ ಮಾಡುತ್ತಿರುವುದರಿಂದ ಅವಳನ್ನು ಮದುವೆಯಾಗುವವನು 1500 ರೂ ಸಂಪಾದಿಸಬೇಕೆಂಬುದು ಅವನ ಆಲೋಚನೆಯಾಗಿತ್ತು. ಕೇವಲ 225 ರೂ ಸಂಪಾದಿಸುತ್ತಿದ್ದ ಒಬ್ಬ ಕತೆಗಾರನ ಜೊತೆ ನನ್ನ ಮದುವೆಯಾಗುವುದು ಅವನಿಗಿಷ್ಟವಿರಲಿಲ್ಲ. ನನ್ನ ಸ್ವಾತಂತ್ರಕ್ಕೆ ಧಕ್ಕೆ ಬರುವ ಸೂಚನೆ ಸಿಕ್ಕಿದ ತಕ್ಷಣ ಅವನ ಮನೆಯನ್ನು ಖಾಲಿ ಮಾಡಿ ಹಾಸ್ಟೆಲ್‌ನಲ್ಲಿ ವಾಸಿಸಲಾರಂಭಿಸಿದೆ. ಈಗ ನನ್ನ ಅಣ್ಣ ನನ್ನ ಮದುವೆಯನ್ನು ನಿಲ್ಲಿಸಲು ನನಗೆ ಸಹಾಯ ಮಾಡಿದ ನನ್ನ ಚಿಕ್ಕಪ್ಪನ ಮಗನನ್ನು ಪೀಡಿಸಲಾರಂಭಿಸಿದ.

" ಇನ್ನೂ ಒಂಟಿ ಇದ್ದೀಯೆ, ಇಸ್ಮತ್‌ಳಿಗೆ ನಿನ್ನನ್ನು ಮದುವೆಯಾಗಲು ಹೇಳು. ಅವಳು ಒಪ್ಪಬಹುದು" ಎಂದು ಹೇಳಿದೆ.

ಒಂದು ದಿನ ಚಿಕ್ಕಪ್ಪನ ಮಗ ಮನೆಗೆ ಬಂದ.

"ನನ್ನ ಜೊತೆ ಚೌಪಾಟಿಗೆ ಬರುತ್ತೀಯ"? ಅವನು ಕೇಳಿದ.

"ಆಫ್ ಕೋರ್ಸ್, ನಾನು ಬರುತ್ತೇನೆ" ಚಕಿತಳಾಗಿ ನಾನು ಹೇಳಿದೆ.

ಚೌಪಾಟಿಯಲ್ಲಿ ಸುತ್ತಾಡಿದ ನಂತರ ಅನುಮಾನಿಸುತ್ತಾ ಕೇಳಿದ, "ಭಾಯಿ ಹೇಳಿದ್ದಾರೆ. ನೀನು ಇಷ್ಟಪಟ್ಟಲ್ಲಿ ನನ್ನನ್ನು ಮದುವೆಯಾಗಬಹುದು".

"ನನಗಾಗಿ ಇಷ್ಟೆಲ್ಲಾ ಮಾಡಿದ ನಿನಗೆ ನಾನು ಶತೃವಾಗಲು ಹೇಗೆ ಸಾಧ್ಯ?" ನಾನು ಕೇಳಿದೆ.

ಶಾಂತ ಚಿತ್ತಳಾಗಿ ಮುಂದೂವರಿಸಿದೆ, 'ನನ್ನ ಕಲ್ಪನೆಯಲ್ಲಿರುವ ನಿನ್ನ ಹೆಂಡತಿ ನಾನಲ್ಲ. ಅವಳು ತುಂಬಾ ಸುಂದರಳಾದ, ಚಲುವೆಯಾದ, ಪರಿಶುದ್ಧ ಮುಗ್ಧ ಹುಡುಗಿ'.

ಮನೆಗೆ ವಾಪಸ್ಸು ಬಂದೆವು. ಆಗ ನಾನು ಶಾಹೀದ್‌ನಿಗೆ ಕೇವಲ ಗೆಳತಿಯಾಗಿದ್ದೆ ಅಷ್ಟೇ. ನಮ್ಮ ಮದುವೆ ಬೇರೆಲ್ಲಕ್ಕಿಂತಲೂ ಹೆಚ್ಚು ಗೊಂದಲಕ್ಕೀಡು ಮಾಡಿತು. ಖ್ವಾಜಾ ಅಹಮದ್ ಅಬ್ಬಾಸ್ ತಮ್ಮ ಮನೆಯ ಹತ್ತಿರ ನನಗೊಂದು ಪ್ಲಾಟ್ ಕೊಡಿಸಿದರು. ಮೊಹಿಸಿನ್ ಒಬ್ಬ ಖಾಜಿಯನ್ನು ಹಿಡಿದು ನಮ್ಮ ಮದುವೆ ಮಾಡಿಸಿದ. ಮದುವೆಗೆ ಮೊದಲೇ ನಾನು ಒಬ್ಬ ಸಮಸ್ಯಾತ್ಮಕ ಹೆಣ್ಣೆಂದು ಶಾಹೀದ್‌ಗೆ ವಿವರಿಸಿದ್ದೆ. ಜೀವನದಲ್ಲಿ ನಾನು ಬಾಂಧವ್ಯದ ಕೊಂಡಿಗಳನ್ನು ಕಳೆದುಕೊಂಡಿದ್ದೇ ಹೆಚ್ಚು. ನಾನು ಎಂದೂ ಅಂತಹ ಬಂಧನದಲ್ಲಿ ಇರಲಾರೆ ಎಂದೂ ವಿವರಿಸಿದ್ದೆ. ಒಬ್ಬ ವಿಧೇಯ, ಕಳಂಕ ರಹಿತ ಪತ್ನಿಯ ಪಾತ್ರಕ್ಕೆ ನಾನು ಲಾಯಕ್ಕಾಗಿಲ್ಲ ಎಂದೆ. ಶಾಹೀದ್ ನನ್ನ ಮಾತು ಕೇಳಲಿಲ್ಲ. ನಾವು ಸ್ನೇಹಿತರಾಗಿದ್ದಾಗ ನನ್ನನ್ನು ಮದುವೆಯಾಗುವುದಾಗಿ ಸಾಧಿಸಿದ. ಇದನ್ನು ಕೇಳಿದ ಎಲ್ಲರೂ ಜೋರಾಗಿ ನಕ್ಕು ಬಿಡುತ್ತಿದ್ದರು. ಇದರಿಂದ ಅವನ ನಿರ್ಧಾರ ಇನ್ನೂ ಧೃಡವಾಯಿತು.

ಮದುವೆಗೆ ಒಂದು ದಿನ ಮೊದಲು ನಾನು ಅವನಿಗೆ ಕೊನೆಯದಾಗಿ ಎಚ್ಚರಿಕೆ ಕೊಟ್ಟೆ. "ಇನ್ನು ಸಮಯ ಇದೆ. ನನ್ನ ಮಾತು ಕೇಳು. ನಾವು ಸದಾಕಾಲ ಸ್ನೇಹಿತರಾಗಿರೋಣ. ಇದನ್ನು ನಾನು ನಿನಗೆ ಗೆಳತಿಯಾಗಿ ಹೇಳುತ್ತಿದ್ದೇನೆ". ಅವನು ಕೇಳಲಿಲ್ಲ. ನಾನು ನನ್ನೊಳಗೇ ಯೋಚಿಸಿದೆ, "ಒಬ್ಬ ಗೆಳತಿ ನಿನಗೆ ಸರಿಯಾದ ತಿಳವಳಿಕೆ ಹೇಳಿದರೂ ಕೇಳಲಿಲ್ಲವೆಂದು ನೀನು ಜ್ಞಾಪಿಸಿಕೊಳ್ಳುತ್ತೀಯ", ಮದುವೆಯ ನಂತರವೂ ಒಮ್ಮೆ ಅವನಿಗೆ ಹೇಳಿದೆ, "ಯಾವುದೇ ಕಡ್ಡಾಯವಿಲ್ಲ. ಸಂಸಾರ ಸರಿ ಎನಿಸದಿದ್ದರೆ ನನ್ನನ್ನು ವಿಚ್ಛೇದನ ಮಾಡು". ತಾನಾಗಿಯೇ ಆಕೆಯನ್ನು ವಿಚ್ಛೇದನ ಮಾಡಿದರೂ, ಇಸ್ಮತ್‌ಳೇ ಆತನನ್ನು ಬಿಟ್ಟು ಓಡಿ ಹೋಗಿದ್ದಾಳೆಂದು ಜನ ತಿಳಿಯುತ್ತಾರೆ ಎಂಬುದು ಶಾಹಿದ್‌ನ ಆಲೋಚನೆಯಾಗಿತ್ತು.

ನನ್ನ ದೊಡ್ಡಣ್ಣ ಮದುವೆಗೆ ಬರಲಿಲ್ಲ. ಸಾಯುವತನಕ ನನ್ನ ಮುಖ ನೋಡಲಿಲ್ಲ. ಆದರೆ ಅಮ್ಮನಿಗೆ ಗೊತ್ತಾದ ಮೇಲೆ ಅಮ್ಮ ತನ್ನ ಕೊನೆಯ ಮಗನನ್ನು ಕಳಿಸಿ ತನ್ನ ಈ ಸಮಸ್ಯೆಯ ಮಗಳ ಬಗ್ಗೆ ತಿಳಿದುಕೊಳ್ಳಲು ತಿಳಿಸಿದ್ದಳು.

ಆರು ಅಡಿ, ಮೂರು ಅಂಗುಲ ಎತ್ತರದ ನನ್ನ ಸಹೋದರ ಶಾಹೀದ್‌ನನ್ನು ಭೇಟಿ ಮಾಡಿದ. ಕುಶಲೋಪರಿಗಳಾದವು. ನಂತರ ನನ್ನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಹೇಳಿದ, "ಏನು ಮಾಡುತ್ತಿದ್ದಿ ಸಹೋದರಿ, ಇವನು ಇಷ್ಟೊಂದು ಮುಗ್ಧನ ಹಾಗೆ ಕಾಣುತ್ತಾನೆ. ನಿನ್ನನ್ನು ಮದುವೆಯಾಗು-ತ್ತಾನೆಯೇ? ನಿನ್ನ ಬುದ್ಧಿಗೆ ಏನಾಗಿದೆ?

"ಅವನು ನನ್ನ ಮಾತು ಕೇಳುತ್ತಿಲ್ಲ. ಮದುವೆ ಬೇಡ ಅಂತ ನಾನು ಹೇಳಿದೆ. ಈಗ ನೀನೂ ಕೂಡಾ ಪ್ರಯತ್ನ ಮಾಡಬಹುದು", ನಿರಾತಂಕವಾಗಿ ನಾನು ಹೇಳಿದೆ.

ಶಾಹೀದ್ ನನ್ನನ್ನು ಖುಷಿಯಾಗಿಟ್ಟಿದ್ದ. ಅವನಿಗೆ ಪುಸ್ತಕಗಳನ್ನು ಕೊಳ್ಳುವುದರ ಹುಚ್ಚೇ ಹಿಡಿದಿತ್ತು. ಒಳ್ಳೆಯ ಸಾಹಿತ್ಯಕ ಪುಸ್ತಕಗಳನ್ನು ಮನೆಗೆ ತರುತ್ತಿದ್ದ. ಹೊಸ ಕಾದಂಬರಿಗಳು ಪ್ರಕಟವಾದಾಗಲೆಲ್ಲಾ ಕೊಂಡುಕೊಂಡು ತರುತ್ತಿದ್ದ. ನನ್ನ ಹತ್ತಿರ ಈಗಲೂ ಇರುವ ಪುಸ್ತಕಗಳೆಲ್ಲಾ ಅವನೇ ಕೊಂಡವುಗಳು.

ಗಂಡಸು ಹೆಣ್ಣನ್ನು ದೇವತೆಯನ್ನಾಗಿಸಿ ಪೂಜಿಸುತ್ತಾನೆ, ಆರಾಧಿಸುತ್ತಾನೆ, ಆಕೆಯನ್ನು ಪ್ರೀತಿಸುತ್ತಾನೆ, ಗೌರವಿಸುತ್ತಾನೆ. ಆದರೆ ಅವಳಿಗೆ ಸಮಾನತೆ ಮಾತ್ರ ಕೊಡಲಾರ. What a beautiful thing that man understands? ಒಬ್ಬ ಅವಿದ್ಯಾವಂತೆಗೆ ಅವನು ಹೇಗೆ ತಾನೆ ಸ್ನೇಹಿತನಾಗಬಲ್ಲ? ಆದರೆ ಸ್ನೇಹಕ್ಕೆ ಬೇಕಾದುದು ಪ್ರೀತಿ, ವಿದ್ಯೆಯಲ್ಲ. ಅಥವಾ ವಿದ್ಯೆಯ ಅಗತ್ಯವೂ ಇದೆಯೋ?

ಶಾಹೀದ್ ನನ್ನನ್ನು ಸಮಾನಳಾಗಿ ಆದರಿಸಿದ. ಆದ್ದರಿಂದ ನಮ್ಮ ವೈವಾಹಿಕ ಬದುಕು ಸಂತೋಷದಾಯಕವಾಗಿತ್ತು.

ಕನ್ನಡಕ್ಕೆ : ಕೃಷ್ಣಮೂರ್ತಿ

"ಘೂಂಘಟ್"

ಕೊಕ್ಕರೆಗರಿಯಷ್ಟು ಬೆಳ್ಳಗಿನ ಹಂಜಿಬುಟ್ಟಿಯಂಥ ತಲೆಗೂದಲು, ಇಡೀ ದೇಹವನ್ನು ಮುಚ್ಚುವಂಥ ಬಿಳೀಬಟ್ಟೆ ಹೊದ್ದು ದೀವಾನ್‌ನ ಮೇಲೆ ಕುಳಿತಿದ್ದ ನನ್ನಜ್ಜ ನನಗೆ ಕಂಡದ್ದು ಅಮೃತಶಿಲೆಯ ಮುದ್ದೆಯಂತೆ. ಅವಳ ಮೈಯಲ್ಲಿ ಒಂದೇ ಒಂದು ಹನಿ ರಕ್ತವಿರುವಂತೆ ಕಾಣುತ್ತಿರಲಿಲ್ಲ. ತನ್ನ ಮಂಕಾದ ಕಣ್ಣುಗಳವರೆಗೂ ಅವಳು ಬಿಳಿಚಿಕೊಂಡಿದ್ದಳು. ಅವಳ ನಿರ್ಲಿಪ್ತ ಕಣ್ಣುಗಳು ನನಗೆ ದಪ್ಪ ಪರದೆ ಮುಚ್ಚಿದ ತಿರುಗಣೆ ಕಿಟಕಿಯ ಹಿಂದಿನಿಂದ ಭೀತಿಯಿಂದ ಇಣುಕುತ್ತಿರುವಂತೆ ಕಾಣುತ್ತಿತ್ತು. ಅವಳ ಇರುವಿಕೆ ಒಂದು ರೀತಿಯಲ್ಲಿ ನಿಶ್ಚಲವಾಗಿ ನಿಂತ ಬೆಳ್ಳಿಮೋಡದಂತೆ, ಕಣ್ಣು ಕುಕ್ಕಿಸುವ ಪ್ರಭೆಯೊಂದನ್ನು ಹೊರ ಚೆಲ್ಲುತ್ತಿರುವಂಥ ಭಾವ ಮೂಡಿಸುತ್ತಿತ್ತು. ಅವಳ ಮುಖದಲ್ಲಿ ಕಾಣುತ್ತಿದ್ದುದು ನಿರ್ಮಲವಾದ ಪರಿಶುದ್ಧ ಭಾವ. ಎಂಭತ್ತರ ಪ್ರಾಯದ ಈ ಕುಮಾರಿ ಗಂಡಿನ ಸ್ಪರ್ಶದ ಅರಿವೇ ಇಲ್ಲದವಳು.

ನನ್ನಜ್ಜಿಗೆ ಹದಿಮೂರು ವರ್ಷ ವಯಸ್ಸಾದಾಗ ಅವಳು ಸುಂದರ ಹೂಗುಚ್ಛದಂತಿದ್ದವಳು. ರೇಷ್ಮೆಯಂಥ ಅವಳ ಮುಡಿ ಸೊಂಟವನ್ನೂ ಮೀರಿ ಕೆಳಕ್ಕಿಳಿದು ಬಳುಕುತ್ತಿತ್ತು. ಆದರೆ ಕಾಲ ಅವಳ ಯೌವನದ ಮೇಲೆ ನಡೆಸಿದ ದಾಳಿ ಸ್ಪಷ್ಟವಾಗಿ ಕಾಣುತ್ತಿತ್ತು. ಆಕೆಯ ಮೃದುತ್ವವನ್ನು ಮಾತ್ರ ಹಾಗೆಯೇ ಉಳಿಸಿತ್ತು. ಅವಳು ಅಂದಿನ ದಿನಗಳಲ್ಲಿ ಎಂಥ ಸುಂದರಿಯಾಗಿದ್ದಳೆಂದರೆ, ಈ ಲೋಕಕ್ಕೆ ಸೇರಿದವಳಂತೆ ಕಾಣುತ್ತಲೇ ಇರಲಿಲ್ಲ. ಅವಳನ್ನು ಯಾರಾದರೂ ಹೊತ್ತುಕೊಂಡು ಹೋಗಿಬಿಡಬಹುದು ಎಂಬ ಭೀತಿಯಲ್ಲಿ ಅವಳಪ್ಪ, ಅಮ್ಮ ರಾತ್ರಿ ವೇಳೆ ನಿದ್ರಿಸುತ್ತಿದ್ದುದೇ ಅಪರೂಪ.

ಅಜ್ಜಿಗೆ ಹದಿನಾಲ್ಕು ವರ್ಷವಾದಾಗ ಅವಳನ್ನು ನನ್ನಮ್ಮನ ಸೋದರಮಾವನಿಗೆ ಕೊಟ್ಟು ಮದುವೆ ಮಾಡುವುದೆಂದು ನಿಶ್ಚಯವಾಯಿತು. ಅಜ್ಜಿ ಎಷ್ಟು ಬೆಳ್ಳಗಿದ್ದಳೋ, ಅವನು ಅಷ್ಟು ಕಪ್ಪಗಿದ್ದ. ಆದರೆ ಕಟ್ಟುಮಸ್ತಾಗಿದ್ದ. ಅವನ ಮೂಗು ಕತ್ತಿಯಂಚಿನಂತೆ ಹರಿತವಾಗಿತ್ತು. ಎಚ್ಚರದ ಕಣ್ಣುಗಳು, ಮಣಿಪೋಣಿಸಿದಂತೆ ಕಾಣುವ ದಂತಪಂಕ್ತಿ. ಆದರೆ ಅವನಿಗೆ ತನ್ನ ಮಸಿ ಬಣ್ಣದ ಬಗ್ಗೆ ಭಾರಿ ಕೀಳರಿಮೆ ಇತ್ತು. ನಿಶ್ಚಿತಾರ್ಥದ ಸಂದರ್ಭದಲ್ಲಿ ಎಲ್ಲರೂ ಅವನನ್ನು ಛೇಡಿಸುತ್ತಿದ್ದರು.

'ಹುಡುಗ, ಹುಡುಗೀನ ಮುಟ್ಟಿದರೆ ಅವಳು ಕಪ್ಪಾಗಿಬಿಡುತ್ತಾಳೆ...!'

'ಚಂದ್ರನನ್ನು ರಾಹು ಮುಸುಕಿದ ಹಾಗೆ...!'

ಕಾಲೇಮಿಯಾಗೆ ಆಗ ಹದಿನೇಳು ವರ್ಷ. ಬುದ್ಧಿ ಬೆಳೆದಿರಲಿಲ್ಲ. ಹಠವಾದಿಯಾಗಿದ್ದ. ತಾನು ಮದುವೆಯಾಗುವ ಹುಡುಗಿಯ ಸೌಂದರ್ಯದ ಬಗ್ಗೆಗಿನ ಈ ಎಲ್ಲ ಮಾತುಗಳನ್ನು ಕೇಳಿ ಕೀಳರಿಮೆಯಿಂದ ಜೋಧಪುರದ ತನ್ನಜ್ಜ ಮನೆಗೆ ಓಡಿ ಹೋದ. ಅಲ್ಲಿ ತನ್ನ ಗೆಳೆಯರೆದುರು ಮಾತನಾಡುವಾಗ ಹೆದರುಹೆದರುತ್ತಲೇ ತನಗೆ ಈ ಮದುವೆ ಇಷ್ಟವಿಲ್ಲವೆಂದು ಹೇಳಿದ. ಆ ಕಾಲದಲ್ಲಿ ಇಂಥ ಅವಿಧೇಯತೆಯನ್ನು ಯಾರೂ ಸಹಿಸುತ್ತಿರಲಿಲ್ಲ. ಒಂದೆರಡು ಒದೆ ಬಿದ್ದರೂ ಆಶ್ಚರ್ಯ ಪಡುವಂಥದ್ದೇನೂ ಇರಲಿಲ್ಲ. ಆಗ ಯಾವುದೇ ಕಾರಣಕ್ಕೂ ನಿಶ್ಚಿತಾರ್ಥವನ್ನು ಮುರಿಯುವ ಪ್ರಶ್ನೆಯೇ ಇರಲಿಲ್ಲ. ಹಾಗೇನಾದರೂ ಆದಲ್ಲಿ ಆ ಕುಟುಂಬಕ್ಕೆ ಕೆಟ್ಟ ಹೆಸರು ಕಟ್ಟಿಟ್ಟಬುತ್ತಿ.

ಇಷ್ಟಾಗಿ ಆ ಹುಡುಗಿಯಲ್ಲಿರುವ ದೋಷವಾದರೂ ಏನು ? ಅವಳು ಸುಂದರವಾಗಿರುವುದೇ ತಪ್ಪೇ? ಇಡೀ ಜಗತ್ತು ಸೌಂದರ್ಯವನ್ನು ಆಸ್ವಾದಿಸುವಾಗ ಸೌಂದರ್ಯವನ್ನು ತಿರಸ್ಕರಿಸುವ ಮೂಲಕ ಇವನು ತನ್ನ ಕೆಟ್ಟ ಅಭಿರುಚಿಯನ್ನು ತೋರಿಸುತ್ತಿದ್ದಾನೆ.

'ಅವಳಿಗೆ ಸೊಕ್ಕು' ಅವನು ತುಸು ಅಧೈರ್ಯದಿಂದಲೇ ಹೇಳಿದ.

'ನಿನಗೆ ಹ್ಯಾಗೆ ಗೊತ್ತು ?'

ಆದಕ್ಕೇನೂ ಆಧಾರವಿರಲಿಲ್ಲ. ಆದರೆ ಸೌಂದರ್ಯವಿದ್ದಲ್ಲಿ ಅಹಂಕಾರವಿರುತ್ತೆ. ಹಾಗಾಗಿ ಕಾಲೇಮಿಯಾ ಈ ಅಹಂಕಾರಕ್ಕೆ ತಲೆಬಾಗುವುದಂತೂ ಸಾಧ್ಯವೇ ಇಲ್ಲ. ಇನ್ನೊಬ್ಬರ ಅಹಂಕಾರಕ್ಕೆ ತಲೆಬಗ್ಗಿಸುವ ಅಭ್ಯಾಸವೇ ಅವನಿಗಿಲ್ಲ.

ಒಮ್ಮೆ ಮದುವೆಯಾದರೆ ಸುಂದರಿ ಕೂಡ ಅವನು ಹೇಳಿದಂತೆ ಕೇಳಲೇಬೇಕು ಎಂಬುದನ್ನು ಮನವರಿಕೆ ಮಾಡಿಕೊಡಲು ಮನೆಯವರು ಸಾಕಷ್ಟು ಪ್ರಯತ್ನ ನಡೆಸಿದರು. ಅವನು ಹಗಲೆಂದರೆ ಅವಳು ಹಗಲೆನ್ನಬೇಕು, ರಾತ್ರಿ ಎಂದರೆ ರಾತ್ರಿ. ಅವನು ಹೇಳಿದಲ್ಲಿ ಕೂರಬೇಕು. ಕೊನೆಗೆ ಕಾಲೇಮಿಯಾನನ್ನು ಒಪ್ಪಿಸಲು ದೈಹಿಕ ಒತ್ತಡ ಕೂಡ

ಹಾಕಲಾಯಿತು. ಹಾಗೂ ಹೀಗೂ ಮದುವೆ ನಡೆದೇ ಹೋಯಿತು.

ಮದುವೆ ಹಾಡು ಬಿಳೀ ಹುಡುಗಿ, ಕರಿ ಹುಡುಗನನ್ನು ಛೇಡಿಸುವಂತಿತ್ತು. ಅವನ ಕಪ್ಪು ಬಣ್ಣವನ್ನು ಲೇವಡಿ ಮಾಡುವ ಶಾಯರಿಯೊಂದನ್ನು ಯಾರೋ ಹೇಳಿದರು. ಇದೆಲ್ಲವೂ ಕಾಲೇಮಿಯಾನ ತಾಳ್ಮೆಯನ್ನು ಪರೀಕ್ಷೆ-ಗೊಡ್ಡಿದಂತಾಯಿತು. ಆದರೆ ಅವನ ಅಸಮಾಧನವನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಅವನೂ ಈ ತಮಾಷೆಯನ್ನು ಖುಷಿಯಾಗಿ ಅನುಭವಿಸುತ್ತಿದ್ದಾನೆ ಎಂದೇ ಎಲ್ಲರೂ ಭಾವಿಸಿದರು. ಈ ತಮಾಷೆ ಮದುವೆ ಮುಗಿಯುವವರೆಗೂ ಮುಂದುವರಿಯಿತು.

ಒರೆಯಿಂದ ಹೊರತೆಗೆದು ಪ್ರಹಾರಕ್ಕೆ ಸಿದ್ಧವಾದ ಕತ್ತಿಯಂತೆ ಅವನು ಪ್ರಸ್ತದ ಕೋಣೆಯನ್ನು ಪ್ರವೇಶಿಸಿ, ಕೆಂಗುಲಾಬಿಗಳಿಂದ ಅಲಂಕೃತಳಾದ ವಧುವನ್ನು ನೋಡಿದಾಗ ಅವನಿಗೆ ಬೆವರು ಕಿತ್ತುಕೊಂಡು ಬಂತು. ಅವಳ ಹಾಲುಬಣ್ಣ ಹಾಗೂ ರೇಷ್ಮೆಯಂಥ ಮೃದುವಾದ ಕೈಗಳನ್ನು ಕಂಡಾಗ ಅವನ ರಕ್ತ ಕುದಿಯಿತು. ಅವಳ ಹಾಲು ಬಣ್ಣದಲ್ಲಿ ತನ್ನ ಇದ್ದಿಲು ಬಣ್ಣವನ್ನು ಅರೆದು, ಅವೆರಡರ ವ್ಯತ್ಯಾಸ ಎಂದೆಂದೂ ಕಾಣದಂತೆ ಮಾಡಿಬಿಡಬೇಕೆಂಬ ಪ್ರಬಲವಾದ ಆಸೆ ಅವನನ್ನು ಕಾಡಿದರೂ, ಅದನ್ನು ಅವನು ಕಷ್ಟಪಟ್ಟು ತಡೆದುಕೊಂಡ.

ಅವಳ ಮುಖ ಮುಚ್ಚಿದ ಪರದೆ ಘೂಂಘಟ್ ತೆರೆಯಲು ಅವನು ಮುಂದಾದಾಗ ಅವಳು ತಲೆತಗ್ಗಿಸಿದಳು.

'ಸರಿ, ಘೂಂಘಟ್ ನೀನೇ ತೆಗಿ' ಎಂದ

ಅವಳು ತನ್ನ ತಲೆಯನ್ನು ಮತ್ತಷ್ಟು ತಗ್ಗಿಸಿದಳು.

'ಘೂಂಘಟ್ ತೆಗಿ' ಅವನು ಕಟುವಾಗಿ ಹೇಳಿದ.

ಅವಳು ಹಿಂಜರಿದು ಮತ್ತಷ್ಟು ಮುದುಡಿಕೊಂಡಳು.

'ಓಹ್! ಇಷ್ಟೊಂದು ಸೊಕ್ಕಾ?' ಎಂದು ಹ್ಲೂಂಕರಿಸಿ ತನ್ನ ಚಪ್ಪಲಿಯನ್ನು ಕೊಂಕಳಲ್ಲಿ ಸಿಕ್ಕಿಸಿಕೊಂಡು ಕಿಟಕಿಯಿಂದ ಹಾರಿ ಮನೆಯ ಮುಂದಿನ ತೋಟವನ್ನು ತಲುಪಿ. ಅಲ್ಲಿಂದ ನೇರವಾಗಿ ರೈಲ್ವೆ ಸ್ಟೇಷನ್ ಸೇರಿ ಜೋಧ್‌ಪುರದ ಗಾಡಿ ಹಿಡಿದ.

ಹುಡುಗ-ಹುಡುಗಿಯನ್ನು ಮುಟ್ಟಲೂ ಇಲ್ಲ ಎನ್ನುವ ಸಂಗತಿ ಮನೆಯಲ್ಲಿ ಎಲ್ಲರಿಗೂ ತಿಳಿಯಿತು. ಕಾಲೇಮಿಯಾ-ನನ್ನು ಈ ಬಗ್ಗೆ ಕೇಳಿದರು.

'ಅವಳಿಗೆ ಸೊಕ್ಕು' ಎಂದು ಅವನು ಘೋಷಿಸಿದ.

'ನಿನಗೆ ಹೇಗೆ ಗೊತ್ತಾಯಿತು?'

'ಅವಳಿಗೆ ನಾನು ಘೂಂಘಟ್ ತೆಗೆಯುವಂತೆ ಹೇಳಿದೆ. ಆದರೆ ಅವಳು ನಾನು ಹೇಳಿದ್ದಕ್ಕೆ ಬೆಲೆ ಕೊಡಲಿಲ್ಲ'.

'ಅಯ್ಯೋ ಪೆದ್ದ! ತನ್ನ ಘೂಂಘಟ್‌ಅನ್ನು ಯಾವುದೇ ಹುಡುಗಿ ತೆಗೆಯುವುದಿಲ್ಲ ಅಂತ ನಿನಗೆ ಗೊತ್ತಿಲ್ವಾ? ನೀನೇ ತೆಗೀಬೇಕಿತ್ತು?'

'ಸಾಧ್ಯವೇ ಇಲ್ಲ. ಅವಳು ತನ್ನ ಘೂಂಘಟ್ ತೆಗೀದಿದ್ರೆ ಅದು ಅವಳ ಹಣೇಬರಹ ಅಂತ ನಾನು ಮೊದಲೇ ತೀರ್ಮಾನಿಸಿದ್ದೇನೆ.'

'ಅವಳೇ ಘೂಂಘಟ್ ತೆಗೀಬೇಕು ಎಂದು ಒತ್ತಾಯಿಸಿದ ನೀನು ಪೆದ್ದ. ಮುಂದೆ ಎಲ್ಲಕ್ಕೂ ಅವಳೇ ಮುಂದಾಗಬೇಕು ಎಂದು ಯೋಚಿಸುವ ನಿನ್ನಂಥ ಪೆದ್ದ ಮತ್ತೊಬ್ಬನಿಲ್ಲ..!'

ಆಗ ವಿವಾಹ ವಿಚ್ಛೇದನದ ಪ್ರಶ್ನೆಯೇ ಇರಲಿಲ್ಲ. ಒಮ್ಮೆ ಮದುವೆಯಾದರೆ ಮುಗಿಯಿತು, ಬೇರಾಗುವ ಮಾತೇ ಇಲ್ಲ. ಕಾಲೇಮಿಯಾ ಎಲ್ಲರ ಕಣ್ತಪ್ಪಿಸಿ ಓಡಿ ಹೋದ. ಏಳು ವರ್ಷ ಅವನು ಹಿಂದಕ್ಕೆ ಬರಲಿಲ್ಲ. ಆದರೆ ಅವರಮ್ಮನಿಗೆ ಮಾತ್ರ ತಿಂಗಳು ತಿಂಗಳೂ ಹಣ ಕಳುಹಿಸುತ್ತಿದ್ದ. ಅವನ ಬಿಳಿ ಹೆಂಡ್ತಿ ಮಾತ್ರ ತವರು ಮನೆ, ಅತ್ತೆ ಮನೆ ನಡುವೆ ತಾಕಲಾಡುತ್ತಲೇ ಇದ್ದಳು. ಮಗಳಿಗೆ ಬಂದ ಕಷ್ಟದಿಂದ ಅವರಪ್ಪ ಅಮ್ಮನಿಗೆ ದಿಕ್ಕು ತೋಚದಂತಾಯಿತು. ಅವನು ಅವಳನ್ನು ಮುಟ್ಟದಿರಲು ಮಗಳು ತಪ್ಪಾದರೂ ಏನು? ಇಂಥ ಅನ್ಯಾಯ ಎಲ್ಲಾದರೂ ನಡೆದಿದೆಯೇ?

ತನ್ನ ಗಂಡಸುತನವನ್ನು ತೋರಿಸಲು ಕಾಲೇಮಿಯಾ ಎಲ್ಲದರಲ್ಲಿಯೂ ತನ್ನನ್ನು ತೊಡಗಿಸಿಕೊಂಡ. ವೇಶ್ಯೆಯರ ಬಳಿಗೆ ಹೋದ. ಸಲಿಂಗಕಾಮಿಗಳ ಸಂಗ ಮಾಡಿದ. ಕೆಲವು ದಿನ ಗಿಳಿಯಾಟವಾಡಿಸುವ ಕೆಲಸವನ್ನೂ ಮಾಡಿದ. ಆದರೆ ಈ ಬಿಳಿ ಹುಡುಗಿ ಮಾತ್ರ ಸದಾ ತನ್ನ ಮುಖವನ್ನು ಘೂಂಘಟ್ ಹಿಂದೆ ಮುಚ್ಚಿಟ್ಟುಕೊಂಡಿರುತ್ತಿದ್ದಳು.

ಅವರಮ್ಮನಿಗೆ ಕಾಯಿಲೆಯಾಗಿ ಹಾಸಿಗೆ ಹಿಡಿದಾಗ ಕಾಲೇಮಿಯಾ ಹಿಂದಕ್ಕೆ ಬಂದ. ಇದೊಂದು ಶುಭ ಶಕುನ ಎಂದು ಭಾವಿಸಿದ ಮನೆಯವರು ಮತ್ತೆ ಗಂಡ-ಹೆಂಡಿರನ್ನು ಒಟ್ಟಾಗಿಸುವ ಪ್ರಯತ್ನ ನಡೆಸಿದರು. ಆದರೆ ಕಾಲೇಮಿಯಾ 'ನಾನು ಅವಳ ಘೂಂಘಟ್ ತೆಗೆಯುವುದಿಲ್ಲ ಎಂದು ಅಮ್ಮನ ಮೇಲೆ ಆಣೆ ಮಾಡಿದ್ದೇನೆ' ಎಂದು ಮೊದಲೇ ಹೇಳಿಬಿಟ್ಟ.

ಬಿಳಿ ಹುಡುಗಿಯನ್ನು ಮತ್ತೆ ವಧುವಿನಂತೆ ಸಿಂಗರಿಸಲಾಯಿತು. 'ನೋಡು ಹುಡುಗಿ ನೀನು ನಿನ್ನ ಘೂಂಘಟ್ ತೆಗೆಯದಿದ್ದರೆ ನಿನ್ನ ಬದುಕೇ ನಾಶವಾಗುತ್ತದೆ. ನಾಚಿಕೆಯನ್ನು ಪಕ್ಕಕ್ಕಿಡು. ಧೈರ್ಯ ತೆಗೆದುಕೊಂಡು ನೀನೇ

ಪರದೆತೆಗಿ. ಅದರಲ್ಲೇನೂ ತಪ್ಪಿಲ್ಲ. ನಾಚಿಕೆ ಪಡುವಂಥದ್ದೂ ಇಲ್ಲ. ಅವನು ನಿನ್ನ ಗಂಡ, ನಿನ್ನ ದೇವರು. ಅವನು ಹೇಳಿದಂತೆ ಕೇಳುವುದು ನಿನ್ನ ಧರ್ಮ. ಅವನ ಇಷ್ಟದಂತೆ ನಡೆಯುವುದು ನಿನ್ನ ಕರ್ತವ್ಯ 'ಎಂದು ಬಿಳಿ ಹುಡುಗಿಯ ಮನವೊಲಿಸಲು ಪರಿಪರಿಯಾಗಿ ಪ್ರಯತ್ನ ನಡೆಯಿತು.

ಮತ್ತೆ ಪ್ರಸ್ತದ ಕೋಣೆ ಸಿದ್ಧವಾಯಿತು. ಬಿಳಿ ಹುಡುಗಿಯನ್ನು ಪ್ರಸ್ತದ ಕೋಣೆಗೆ ತಳ್ಳಿ ಬಾಗಿಲು ಮುಚ್ಚಿದರು. ಬಿಳಿ ಹುಡುಗಿಗೆ ಈಗ ಇಪ್ಪತ್ತೊಂದರ ಪ್ರಾಯ. ಅರಳುವ ಯೌವನ. ಅರಳಿದ ಹೆಣ್ತನ. ಅವಳ ಕಣ್ರೆಪ್ಪೆಗಳು ಭಾರವಾಗಿದ್ದವು. ಈ ರಾತ್ರಿಗಾಗಿ ಅವಳು ಏಳು ವರ್ಷದಿಂದ ಕನಸು ಕಾಣುತ್ತಿದ್ದಳು. ಅವಳ ಗೆಳತಿಯರು ಹೇಳಿದ ಗುಟ್ಟಿನಿಂದ ಅವಳ ಎದೆ ವೇಗವಾಗಿ ಬಡಿದುಕೊಳ್ಳುತ್ತಿತ್ತು.

ಕಾಲೇಮಿಯಾನ ಕಣ್ಣು ಮದರಂಗಿ ಹಚ್ಚಿದ ಅವಳ ಕೈಕಾಲುಗಳ ಮೇಲೆ ಹರಿಯಿತು. ಅವನು ತನ್ನನ್ನು ನಿಯಂತ್ರಿಸಿಕೊಳ್ಳುವ ಪ್ರಯತ್ನ ನಡೆಸಿದ್ದ. ವಧು ಅವನ ಮುಂದೆ ಲಜ್ಜೆಯ ಒಜ್ಜೆ ಹೊತ್ತು ಕೂತಿದ್ದಳು. ಈಗವಳು ಹದಿನಾಲ್ಕರ ಮೊಗ್ಗಲ್ಲ. ಇಪ್ಪತ್ತೊಂದರ ಬಿರಿದ ಹೂವು. ಅವನ ಮನಸ್ಸು ಜಾಗೃತವಾಗತೊಡಗಿತು. ಇದು ಅವನ ಪಾಲಿಗೆ ಹೊಸ ಅನುಭವಗಳ ರಾತ್ರಿಯಾಗುವ ಸಾಧ್ಯತೆ. ಪಳಗಿದ ಕಾಲೇಮಿಯಾ ಬೇಟೆಗಾಗಿ ಕಾಯುವ ಹುಲಿಯಂತೆ ನಿರೀಕ್ಷೆಯಲ್ಲಿದ್ದ. ಅವನು ಎಂದೂ ತನ್ನ ಹೆಂಡತಿಯ ಮುಖ ನೋಡಿರದಿದ್ದರೂ ಇನ್ನೊಂದು ಹೆಣ್ಣಿನೊಂದಿಗಿರುವಾಗ ಕಲ್ಪನೆಯ ಮುಖವೊಂದು ಅವನ ಮುಂದೆ ನಿಲ್ಲುತ್ತಿತ್ತು.

'ನಿನ್ನ ಘೂಂಘಟ್ ತೆಗಿ' ಅವನ ನಡಗುವ ಧ್ವನಿ.

ಆದರೆ ಬಿಳಿ ಹುಡುಗಿಯಲ್ಲಿ ಸಣ್ಣ ಚಲನೆಯೂ ಕಾಣಿಸಲಿಲ್ಲ.

'ನಿನ್ನ ಘೂಂಘಟ್ ತೆಗಿ ' ಉಬ್ಬಿದ ಗಂಟಲಿನಿಂದ ಅನುನಯದ ಧ್ವನಿ.

ಮುರಿಯದ ಮೌನದ ಮುಂದುವರಿಕೆ.

'ನಾನು ಹೇಳಿದಂತೆ ಕೇಳದಿದ್ದರೆ, ನನ್ನ ಮುಖವನ್ನು ಮತ್ತೊಂದೂ ನಿನಗೆ ತೋರಿಸಲಾರೆ'.

ಬಿಳಿ ಹುಡುಗಿ ಮೌನವಾಗಿದ್ದಳು. ಅವಳಲ್ಲಿ ಯಾವುದೇ ರೀತಿಯ ಚಲನೆ ಇರಲಿಲ್ಲ.

ಕಾಲೇಮಿಯಾ ತನ್ನ ಶಕ್ತಿ ಎಲ್ಲವನ್ನೂ ಬಳಸಿ ಶಯನಗೃಹದ ಕಿಟಕಿಯ ಬಾಗಿಲನ್ನು ಒಡೆದು ಹೊರಕ್ಕೆ ಹಾರಿ, ರೈಲ್ವೆ ಸ್ಟೇಷನ್ ಹಾದಿ ಹಿಡಿದ.

ಮತ್ತೆ ಅವನು ಹಿಂದಿರುಗಿ ಬರಲಿಲ್ಲ.

ಯಾರೂ ಮುಟ್ಟದ ಹೂವಾಗಿ ಬಿಳಿ ಹುಡುಗಿ ಮೂವತ್ತೈದು ವರ್ಷ ಕಾದಳು. ಅವಳ ಕುಟುಂಬದ ಸದಸ್ಯರೆಲ್ಲ ಕಾಲವಶರಾದರು. ಫತೇಪುರ್ ಸಿಖ್ರಿಯಲ್ಲಿನ ತನ್ನ ಚಿಕ್ಕಮ್ಮನ ಮನೆಯಲ್ಲಿರುವಾಗ ಬಿಳಿ ಹುಡುಗಿಗೆ ಕಾಲೇಮಿಯಾ ಹಿಂದಿರುಗಿದ ವಿಷಯ ಗೊತ್ತಾಯಿತು.

ವಿಲಾಸಿ ವಿಟನಂತೆ ಜೀವಿಸಿದ ಕಾಲೇಮಿಯಾ ಕಾಯಿಲೆಯ ಮೂಟೆ ಹೊತ್ತೇ ಹಿಂದಕ್ಕೆ ಬಂದಿದ್ದ. ಸಾವಿನ ಕೊನೆಯ ಕ್ಷಣಗಳಲ್ಲಿ ಅವನು ಬಿಳಿ ಹುಡುಗಿಯನ್ನು ನೋಡಲು ಹಂಬಲಿಸಿದ. ಅವಳು ಬಂದಲ್ಲಿ ಅವಳ ಮಡಿಲಲ್ಲಿ ನೆಮ್ಮದಿಯಾಗಿ ಕೊನೆಯುಸಿರೆಳೆಯುವುದಾಗಿ ಬೇಡಿಕೊಂಡ.

ಕಾಲೇಮಿಯಾನ ಕರೆ ಬಂದಾಗ ಬಿಳಿ ಹುಡುಗಿ ಕಂಬಕ್ಕೊರಗಿ ನಿಶ್ಚಲಳಾಗಿ ಕೂತಿದ್ದಳು. ಸ್ವಲ್ಪ ಹೊತ್ತಿನ ನಂತರ ತನ್ನ ಹಳೆಯ ಟ್ರಂಕಿನಿಂದ ವಧುವಿನ ಉಡುಪು ತೆಗೆದು ತೊಟ್ಟುಕೊಂಡು ನಿಧಾನವಾಗಿ ಕಾಲೇಮಿಯಾನ ಬಳಿಗೆ ಬಂದು ಕೂತಳು.

'ನಿನ್ನ ಘೂಂಘಟ್ ತೆಗಿ' ಕನವರಿಕೆಯ ಧ್ವನಿ.

ಬಿಳಿ ಹುಡುಗಿಯ ಕೈಗಳು ಘೂಂಘಟ್‌ವರೆಗೆ ತಲುಪಿ, ಮತ್ತೆ ಹಿಂದಿರುಗಿದವು.

ಕಾಲೇಮಿಯಾ ಕೊನೆಯುಸಿರೆಳೆದಿದ್ದ.

ಅದುವರೆಗೆ ಮೌನವಾಗಿ ಗೋಡೆಗೊರಗಿ ಕುಳಿತಿದ್ದ ಬಿಳಿ ಹುಡುಗಿ ತನ್ನ ಕೈಗಳನ್ನು ಮಂಚದ ಚಪ್ಪರಗಂಬಕ್ಕೆ ಬೀಸಿದಾಗ ಅವಳ ಕೈಯಲ್ಲಿನ ಬಳೆಗಳೆಲ್ಲ ಪುಡಿಪುಡಿಯಾದವು. ವಧುವಿನ ಬಣ್ಣದ ಘೂಂಘಟ್ ಬದಲಿಗೆ ಅವಳು ವಿಧವೆಯ ಬಿಳಿ ಸೆರಗನ್ನು ತನ್ನ ತಲೆಯ ಮೇಲೆಳೆದು ಕೊಂಡಳು.

ಕನ್ನಡ ಅನುವಾದ:

- ಮುರಳೀಧರ ಖಜಾನೆ

(ಅನುವಾದಕರ ಮಾತು : ಪಾರ್ಸಿಯ ಘೂಂಘಟ್‌ಗೆ ಹೊಂದುವಂಥ ಆಂಗ್ಲ ಪದ 'ವೇಯ್ಲ್' ಅಂದರೆ ಪರದೆ. ಕನ್ನಡದಲ್ಲಿ ಇದನ್ನು ಅನುವಾದಿಸುವಾಗ ಅವಕುಂಠನ, ಮುಖಪರದೆ ಇತ್ಯಾದಿಯಾಗಿ ಅನುವಾದಿಸಬಹುದು. ಹೆಚ್ಚು ಕಡಿಮೆ ನಮ್ಮ ಹೆಂಗಸರು ಮುಖಮುಚ್ಚಿಕೊಳ್ಳುವ ಸೆರಗಿನಂಥದ್ದು ಎನ್ನಬಹುದು. ಆದರೆ ಇದ್ಯಾವುದೇ ಪದ ಘೂಂಘಟ್‌ಗೆ ಸಮಾನವಾದ ಅರ್ಥವನ್ನು ಕೊಡುವುದಿಲ್ಲ ಎಂದೆನ್ನಿಸಿದ ಕಾರಣ, ಇದನ್ನು ಘೂಂಘಟ್ ಎಂದೇ ಬಳಸಿಕೊಂಡಿದ್ದೇನೆ.)

"ನಾನು ಕಂಡ ಇಸ್ಮತ್ ಚುಗ್‌ತಾಯಿ"

ತಸ್ಲಿಂ ತಾಜ್
ಆಂಗ್ಲ ಭಾಷಾ ಉಪನ್ಯಾಸಕಿ, ಮಹಾರಾಣಿ ಕಾಲೇಜ್

ಬಹುಶಃ ಒಂಭತ್ತನೇ ತರಗತಿಯಲ್ಲಿ ಓದುತ್ತಿದ್ದಾಗ ಒಂದು ವಿಚಿತ್ರ ವಾತಾವರಣದಲ್ಲಿ ನನಗೆ ಇಸ್ಮತ್‌ಳ ಪರಿಚಯವಾದದ್ದು.

ನನಗೆ ಚೆನ್ನಾಗಿ ನೆನಪಿದೆ, ನನ್ನ ಅಕ್ಕ ಮತ್ತು ಅವಳ ಸ್ನೇಹಿತರು ಗುಸು ಗುಸು ಹೇಳಿದ್ದು, "ಛೀ, ಯಾಕೆ ಹೀಗೆ ಬರೆದಿದ್ದಾಳೆ "?. ಮತ್ತು ಆಕೆಯ 'ಲೀಹಾಫ್'(ಹೊದಿಕೆ) ಕತೆಯ ಬಗ್ಗೆ ಎಲ್ಲರೂ ಛೀಮಾರಿ ಹಾಕುತ್ತಿದ್ದುದು ನೆನಪಿದೆ. "ಅಯ್ಯೋ ಅವಳನ್ನು ಓದುವುದಕ್ಕೆ ತುಂಬಾ ಮುಜುಗರವಾಗುತ್ತೆ, ಕೊಂಚವೂ ನಾಚಿಕೆಯಿಲ್ಲ. ಈ ಲೇಖಕಿಗೆ," ಎಂದು ಸುಮಾರು ಜನರು ಮಾತನಾಡಿಕೊಳ್ಳುತ್ತಿದ್ದರು. ನನಗೆ ಅವಳ ಬಗ್ಗೆ ವಿಪರೀತ ಕುತೂಹಲ ಉಂಟಾಯಿತು. ಅದರಲ್ಲೂ ಆ ವಯಸ್ಸೂ ಸಹ ಮನಷ್ಯನಿಗೆ ಇಣುಕಿ ಇಣುಕಿ ನೋಡುವಂತೆ ಮಾಡುತ್ತದೆ. ರಾತ್ರಿಯ ವೇಳೆ ಒಂದು ಉರ್ದು ಮ್ಯಾಗ್‌ಜೈನ್ ದಿಂಬಿನ ಕೆಳಗೆ ಬಚ್ಚಿಟ್ಟೆ. ಅದನ್ನು ಕದ್ದು ಓದಲಿಕ್ಕೆ ಪ್ರಾರಂಭಿಸಿದೆ. ಒಂದೇ ಉಸಿರಿನಲ್ಲಿ 'ಲೀಹಾಫ್' ಕತೆ ಓದಿ ಮುಗಿಸಿದೆ. ಹಾಗೆಯೇ ದಪ್ ಎಂದು ಹೊದಿಕೆ ಹೊದೆದುಕೊಂಡೆ ತಲೆ ಬುಡವೇ ಅರ್ಥ ಆಗಲಿಲ್ಲ. "ಏನಪ್ಪಾ, ಇವಳು ನಾಚಿಕೆಗೆಟ್ಟವಳು, ಹೆಂಗೆಂಗೋ ಬರೀತಾಳೆ ಅಂತಾರೆ, ಅಯ್ಯೋ ಏನ್ ತಾನೆ ಇದೆ ಇದರಲ್ಲಿ" ಎನಿಸಿತು.

ಆದರೆ ಇಸ್ಮತ್‌ನ ಪರಿಚಯ ಎರಡನೆಯ ಸಾರಿ ನನ್ನ ವ್ಯಕ್ತಿತ್ವವನ್ನೇ ಅಲ್ಲಾಡಿಸಿತು. ನಾನು M.Phil ಮಾಡುವ ಪ್ರಯತ್ನದಲ್ಲಿದ್ದೆ. ನನ್ನ ಗೈಡ್ ಶ್ರೀಯುತ ಪ್ರೊ.ಬಾಬಯ್ಯನವರನ್ನು ಭೇಟಿಯಾದಾಗ ಅವರು ಹೇಳಿದರು, "ಯಾಕಮ್ಮಾ, ನೀನು ಒಬ್ಬ ಉರ್ದು ಲೇಖಕಿಯ ಬಗ್ಗೆ ರೀಸರ್ಚ ಮಾಡಬಾರದು". ಧಿಢೀರನೇ ಇಸ್ಮತ್‌ಳ ಹೆಸರು ನಾಲಿಗೆಯಿಂದ ಜರಿಯಿತು. ಅವರು, " Yes do it ma, ಅವಳನ್ನು ಎರಡು ಮೂರು ತಿಂಗಳು ಚೆನ್ನಾಗಿ ಓದು" ಎಂದರು. ಆ ನಂತರ ಮತ್ತೆ ಕುತೂಹಲದಿಂದ 'ಲೀಹಾಫ್' ಓದಿ, ಓದಿ ಅವಳನ್ನು ಜೀರ್ಣಿಸಿಕೊಂಡೆ. ನನ್ನ ಮಗ ಟಿಪ್ಪು ಆಗ ನಾಲ್ಕು ವರುಷದವನು. ನಾನು ಯಾವಾಗಲೂ ಇಸ್ಮತ್‌ಳ ಬಗ್ಗೆ ಓದುವುದು, ಮಾತನಾಡುವುದನ್ನು ನೋಡಿ 'ಈ ಇಸ್ಮತ್‌ನ್ನು ನೀನು ಯಾವಾಗ ಹೂಳ್ತೀಯ ಮಾಜಿ' ಎಂದು ಕೇಳುತ್ತಿದ್ದ. "ಯಾವಾಗಲೂ ಅವಳ ಜೊತೆಗೇ ಇರುತ್ತೀಯ, ಈಚೆಗೆ ನನ್ನ ಜೊತೆಗೆ ಆಡುವುದಿಲ್ಲ" ಎನ್ನುತ್ತಿದ್ದ. "ಪುಟ್ಟು ಅವಳನ್ನು ಹೊಳು ಹಾಕಿಲ್ಲ, ಸುಟ್ಟು ಹಾಕಿ ತುಂಬಾ ವರ್ಷವಾಯಿತು" ಎಂದು ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಾ ಅವನ ಜೊತೆ ಆಟವಾಡಲು ತೊಡಗಿದೆ.

ಅವಳ ಕತೆ "ನನ್ನಿಕಿ ನಾನಿ ಮತ್ತು ಚೌತಿಕ ಜೋಡ್", ಓದುತ್ತಾ ವಿಚಿತ್ರ ಸಂಕಟವಾಯಿತು. ಓದುವಾಗ ಕೆಲವೊಮ್ಮೆ ಅಕ್ಷರಗಳು ಕಣ್ಣೀರಿನಲ್ಲಿ ತೇಲುತ್ತಾ ಮಾಯವಾಗುತ್ತಿತ್ತು. ಮತ್ತೆ ಸುಧಾರಿಸಿಕೊಂಡು ಓದುತ್ತಿದ್ದೆ. ಒಂದೊಂದು ಸಾರಿ 'ಏನಪ್ಪಾ ಇವಳು ಇಂಥಾ ದೊಡ್ಡ ಲೇಖಕಿ ಎನ್ನುತ್ತಾರೆ. ನಾನು ಕಾಣದೇ ಇದ್ದದ್ದು ಏನು ಬರೆದಿದ್ದಾಳೆ? ಎಲ್ಲವೂ ಸಹ ನನ್ನ ಸುತ್ತು-ಮುತ್ತ-ಲಿನ ವಾತಾವರಣದಲ್ಲಿರುವುದನ್ನೇ ಚಿತ್ರಿಸಿದ್ದಾಳೆ. ಆಕೆ ಒಬ್ಬ ಚಿತ್ರಕಾರಳಂತೆ ನನಗೆ ಭಾಸವಾಗ ತೊಡಗಿದೆ. ನನ್ನ ಕಾಲದಲ್ಲಿ ಸಹ ಇದೇ ವಾತಾವರಣವಿದೆ. ಏನೂ ಬದಲಾಗಿಲ್ಲ. ನನ್ನ ಸಮುದಾಯದ ಪರಿಸರ ಹೀಗೇ ಇದೆಯಲ್ಲ ಎನಿಸಿತು. "ಚೌತಿಕ ಜೋಡ" ಟೀವಿಯಲ್ಲಿ ನೋಡಿದ್ದೂ ಸಹ ನನಗೆ ನೆನಪಿದೆ. ಒಬ್ಬ ಮುಸ್ಲಿಂ ವಿಧವೆ ತನ್ನ ಮಗಳ ಮದುವೆಗೆ ಮಿತಿ ಮೀರಿ ಪ್ರಯತ್ನ ನಡೆಸುವುದು, ಅವಳ Psychological Compulsions ಇವು ನನ್ನ ದಿನ ನಿತ್ಯದ ಸಮಾಜದಲ್ಲಿಯೇ ನೋಡುತ್ತಿದ್ದೆ. ಬಡ ಹುಡುಗಿ ಹಮೀದಳ ಅತ್ಯಾಚಾರ ಇಸ್ಮತ್‌ಳ ಕತೆಯಲ್ಲಿ ಮುಚ್ಚಿ ಹೋದ ಹಾಗೆ ನಮ್ಮ ಸುತ್ತ-ಮುತ್ತಲೂ ಮುಚ್ಚಿ ಹೋಗುತ್ತಿದೆ. ಹಲವಾರು ಹಮೀದಾಗಳು ಅತ್ಯಾಚಾರದ ಘಟನೆಯ ನಂತರ ಮೌನಿಗಳಾಗುವುದು ಸಹಜವಾಗಿ ಬಿಟ್ಟಿದೆ. ಕುಬ್ರಳಂತಹ ಅವಸ್ಥೆ ಪಡುವ ಹೆಂಗಸರು ನಮ್ಮ ಸುತ್ತ ಮುತ್ತಲೇ ಇದ್ದಾರೆ.

ಇಸ್ಮತ್ ಓದುತ್ತಾ ಇದ್ದಾಗ ನನ್ನ ಸ್ಥಿತಿ ಹೇಗಿತ್ತೆಂದರೆ ಎಷ್ಟೋ ಬಾರಿ ನಾನು ಒಂಟಿಯಾಗಿ ಅವಳೊಡನೆ ಸುಭಾಷಿಸುತ್ತಾ ಇದ್ದೆ. ಧಿಡೀರಂತ ಎಷ್ಟೋ ಬಾರಿ 'Hats off ಇಸ್ಮತ್' ಎಂದು ಅವಳ ಜೊತೆಗೆ ಮಾತನಾಡಲು ತೊಡಗುತ್ತಿದ್ದೆ. ಇಸ್ಮತ್‌ಳ ಮಾನವೀಯ ಮುಖ ಪರಿಚಯವಾಗಬೇಕೆಂದರೆ ಅವಳ 'ಲೀಹಾಫ್' ಕತೆ ಓದಬೇಕು.

‘ Women’s sensuality is purely a human sensuality ’ಎನ್ನುವ ಅರಿವನ್ನು ಇಸ್ಮತ್ ಮೂಡಿಸುತ್ತಾಳೆ. ಬೇಗವ್ ಜಾನ್‌ಳ ಚಿತ್ರಣ ನಿಜಕ್ಕೂ



ಲೆಸ್‌ಬಿಯನಿಸಂ ಪ್ರೋತ್ಸಾಹಿಸುವುದು, ಅಥವಾ ಧಿಕ್ಕರಿಸುವುದು ಖಂಡಿತಾ ಅಲ್ಲ, ಹೆಂಗಸಿನ ದೇಹಕ್ಕೂ ದೈಹಿಕ ಇಚ್ಛೆಗಳಿರುತ್ತವೆ, ಏರಿಳಿತಗಳಿರುತ್ತವೆ ಎಂದು ಮನದಟ್ಟು ಮಾಡುವುದು. ಈ ಸತ್ಯವನ್ನು ಸಮಾಜ ಜೀರ್ಣಿಸಿಕೊಂಡಲ್ಲಿ ಎಷ್ಟೋ ಸಾಮಾಜಿಕ ದುರಂತಗಳನ್ನು ತಡೆಗಟ್ಟಬಹುದು. ಈ ಮನ ಮುಟ್ಟಿಸುವ ಸತ್ಯವನ್ನು ತಿಳಿಸುವ ಇಸ್ಮತ್‌ಳನ್ನು ‘Obscene Writer’ ಎಂದು ಪ್ರಶ್ನಿಸಿರುವುದು ಖೇದವಾದ ಸಂಗತಿಯಾಗಿದೆ ಗಂಡಿಗೆ ದೈಹಿಕ ಇಚ್ಛೆಗಳು, ಪೂರೈಕೆಗಳು ಎಷ್ಟು ಅಗತ್ಯವೋ, ಅಷ್ಟೇ ಅಗತ್ಯ ಹೆಣ್ಣಿಗೂ ಇದೆ ಎಂಬುದು ಇಸ್ಮತ್ ಹೇಳುವ ಸತ್ಯ.

ಉರ್ದು ಸಾಹಿತ್ಯದಲ್ಲಿ ‘ಹೆಣ್ಣಿನ ದೇಹ’ದ ಚಿತ್ರಣ, ಅದರ ಪರಿಚಯವನ್ನು ಮಾಡಿದವಳೇ ಇಸ್ಮತ್ ಚುಗ್‌ತಾಯಿ. Helen Cixiou ಅವಳ ಲೇಖನದಲ್ಲಿ ಸ್ತ್ರೀವಾದಿ ವಿಚಾರಧಾರೆ ಹೇಳುತ್ತಾ ಆಕೆ ಹೇಳುತ್ತಾಳೆ. (The laugh of medusa)

“ಹೆಣ್ಣು ತನ್ನ ದೇಹದ ಬಗ್ಗೆ, ದೇಹದ ವಾಣಿಯ ಬಗ್ಗೆ ಬರೆಯಲೇಬೇಕು.

“Women’s body must be heard”.

ಇಸ್ಮತ್ ಇದನ್ನು 1942 ರಲ್ಲಿಯೇ ಮನದಟ್ಟು ಮಾಡಿದ್ದಾಳೆ - ‘ಲೀಹಾಫ್’ನಲ್ಲಿ ಬೇಗಂ ಜಾನ್‌ಳ ಹೋರಾಟ ಒಂದು ಬದುಕುಳಿಯುವ ಪ್ರಶ್ನೆಯಾಗಿಯೇ ಉಳಿಯುತ್ತದೆ. ವೈವಾಹಿಕ ಜೀವನ ಮತ್ತು ಆದರ ಸಂಬಂಧಗಳ ಟೊಳ್ಳುತನವನ್ನು ಇಸ್ಮತ್ ‘ಲೀಹಾಫ್’ನಲ್ಲಿ ಬಹಿರಂಗಗೊಳಿಸಿದ್ದಾಳೆ, ಇಸ್ಮತ್‌ಳ ಅಪೂರ್ವ ಕೊಡುಗೆ ಭಾಷೆಯಲ್ಲಿದೆ. ಅವಳ ಭಾಷಾ ಪ್ರೌಢಿಮೆ ಎಂತಹುದೆಂದರೆ ಆಕೆ ಸರಳ, ನೇರವಾದ, ದಿನಬಳಕೆಯ, ವಾಡಿಕೆಯ, ನಿಕೃಷ್ಟ ಮಾತುಗಳನ್ನೂ ಚಾಚೂ ತಪ್ಪದೇ ತನ್ನ ಬರವಣಿಗೆಯಲ್ಲಿ ಕಟ್ಟಿ ಕೊಡುವಂತಹವಳು. ಭಾಷೆಯಲ್ಲಿನ ಈಕೆಯ ಸ್ವಾತಂತ್ರ್ಯ ಮಾದರಿಯನ್ನು ನಾನು ಉರ್ದು ಸಾಹಿತ್ಯದಲ್ಲಿ ಇನ್ನಾವ ಲೇಖಕರಲ್ಲಿಯೂ ಕಂಡಿಲ್ಲ. **ಸಾಧತ್ ಹಸನ್** ಮಂಟೋ ರವರಲ್ಲಿ ಭಾಷೆಯ ಬಳಕೆಯಲ್ಲಿನ ವೈಶಿಷ್ಟ್ಯ ಕಾಣ -ಬಹುದಾದರೂ, ಮೊದಲ ಲೇಖಕಿಯಾಗಿ ನಮಗೆ ಸಿಗುವುದು ಇಸ್ಮತ್‌ಳೇ.

ನನ್ನ ಸಂಬಂಧೀ ಪುರುಷರೊಬ್ಬರ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಗುನುಗಿ ಸಿಟ್ಟಿಗೆಬ್ಬಿಸುತ್ತವೆ. “ಹೆಂಗಸ್ರು ತುಂಬಾ ಮಾತನಾಡಬಾರ್ದು, ಗಟ್ಟಿಯಾಗಿ, ಕೆಟ್ಟ ಕೆಟ್ಟ ಹೊಲಸು ಮಾತುಗಳನ್ನು ಆಡಬಾರದು” ಎನ್ನುವುದು ಅವರ ಉವಾಚ. ಆಗೆಲ್ಲ ಇಸ್ಮತ್‌ಳ ನೇರವಾದ ಬರವಣಿಗೆ ನನಗೆ ನೆನಪಾಗುತ್ತಿತ್ತು. ಉರ್ದು ಲೇಖಕ **ರಾಜೇಂದ್ರ ಸಿಂಗ್ ಬೇಡಿ ರವರ** ಆಕೆಯ ಭಾಷೆಯ ಬಗ್ಗೆ ಹೇಳಿದ ನುಡಿಗಳು ಉಲ್ಲೇಖಾರ್ಹ. “ಹೆಂಗಸಾಗಿ ಎಂತೆಂತಹ ಕೃತಿಗಳು, ವಾಕ್ಯಗಳನ್ನು ಆಕೆ ಬರೆದಿದ್ದಾಳೆ. ದಮ್ಮಯ್ಯ, ನಿಜಕ್ಕೂ ನಾವು ಹಿಂದುಳಿದೆವು ”. ಇಸ್ಮತ್‌ಳನ್ನು ಹೀಗೆ ಬಿಚ್ಚು ನುಡಿಯಿಂದ ಅವರು ಹೊಗಳಿದ್ದಾರೆ. ಅವಳ ಭಾಷೆಯಲ್ಲಿ ಆಕೆ ನಾಲಿಗೆಯನ್ನು ಸುಲಭವಾಗಿ ಸಡಿಲಗೊಳಿಸಿದ್ದಾಳೆ. ರಂಡಿ, ಚುಡೇಲ್, ಇಂತಹ ಬಳಕೆಗಳು ಏನೂ ಹೊಸದಾಗಿ ಕಾಣಿಸುವುದಿಲ್ಲ.

ಜೂಲಿಯಾ ಕ್ರಿಸ್ತವ್ “pioneer of french feminist thought” ನಲ್ಲಿ ಭಾಷೆಯನ್ನು “ಫೀಮೇಲ್ ಬಾಡಿ ಎಕ್ಸ್‌ಪ್ರೆಷನ್”ಗೆ ಬಳಸಬೇಕು ಎನ್ನುತ್ತಾಳೆ. ಇಸ್ಮತ್‌ಳ

ಭಾಷೆ ಆಲೋಚನೆ, ವರ್ಣನೆ, ಗಮನ, ವಿವರಣೆ ಎಲ್ಲಕ್ಕೂ ಸಂಬಂಧಿಸಿದಂತೆ ಉದಾರಭಾವದಲ್ಲಿ ಇರುವುದು ನನಗಿಷ್ಟವಾದ ಗುಣ. ಆಕೆಯ ಭಾಷೆ ಪಂಚೇಂದ್ರಿಯಗಳ ಅನುಭವವನ್ನು ಉಂಟು ಮಾಡುತ್ತದೆ ಎಂದು ನನ್ನ ನಂಬಿಕೆ. ಆಕೆಯ ಭಾಷೆಯನ್ನು ಮೂಸಬಹುದು, ನೋಡಬಹುದು, ರುಚಿಸಬಹುದು, ಸ್ಪರ್ಶದ ಅನುಭವವನ್ನೂ ಪಡೆಯಬಹುದು ಎಂದು ನನ್ನ ಅನಿಸಿಕೆ.

ಭಾಷೆ ಲೋಕಕ್ಕೆ ಪುರುಷರು ಹಾಕಿದ್ದ ಲಕ್ಷ್ಮಣ ರೇಖೆಯನ್ನು ದಾಟಿ ತನ್ನದೇ ಸಹಜ, ಸ್ವತಂತ್ರ್ಯ ಭಾಷೆ ಹುಟ್ಟು ಹಾಕಿದ ಇಸ್ಮತ್‌ಳ ಒಡಲಾಳದ ಮಾತುಗಳು ಹೀಗಿವೆ, "ಎಲ್ಲರೂ ನನ್ನನ್ನು ಉರ್ದು ಸಾಹಿತ್ಯದ ವ್ಯಾಂಪ್ ಎನ್ನುತ್ತಾರೆ. ಆದರೆ ನಾನು ಅನುಭವಿಸಿದ ಕಷ್ಟ, ಸಂಕಟ, ನೋವು ಯಾರು ತಾನೆ ಅನುಭವಿಸಿದ್ದಾರೆ ಹೇಳಿ "?

ಮನಮದ್ ಹಸನ್ ಎಂಬ ವಿಮರ್ಶಕರು ಇಸ್ಮತ್‌ಳ ಬಗ್ಗೆ ಹೀಗೆ ಹೇಳುತ್ತಾರೆ:

"ಇಸ್ಮತ್ ತನ್ನ ಕೃತಿಗಳಲ್ಲಿ ಹೆಣ್ಣಿನ ಸೆರಗಿನ, ಸರದ, ಬಳೆಯ ಝುಣ ಝುಣದ ಹಿಂದೆ ಒಂದು ಹೆಣ್ಣಿನ ಜೀವಂತ ಉಸಿರಾಟವಿದೆ. ಅವಳು ಬರಿಯ ನೆಕ್ಕುವುದಕ್ಕೆ, ಚುಂಬಿಸುವುದಕ್ಕೆ ಮಾತ್ರ ಸೀಮಿತಳಲ್ಲ".

ಫಿಯಾಜ್ ರಫತ್ ಹೇಳುತ್ತಾರೆ:

"ಅವಳ ಕತೆಗಳು ಕನಸಿನಲ್ಲೂ ಸಹ ಆಘಾತವನ್ನು ನೀಡುತ್ತವೆ". ಇಸ್ಮತ್‌ಳ ಅದ್ಭುತ ವೈಚಾರಿಕತೆ ಎಂದರೆ ಅವಳು ಹೆಂಗಸರನ್ನು ಅಟ್ಟಕ್ಕೇರಿಸುವುದಿಲ್ಲ. ಅಥವಾ ಗಂಡಸರನ್ನು ಸಾರಾಸಗಟಾಗಿ ದೂಷಿಸುವುದಿಲ್ಲ. ಅವಳು ಹೆಣ್ಣಿನಲ್ಲಿ ಗಂಡಸುತನ, ಗಂಡಸಿನಲ್ಲಿ ಹೆಣ್ಣುತನವನ್ನು ಪ್ರತಿಬಿಂಬಿಸಿದ್ದಾಳೆ. ಹಾಗಾಗಿಯೇ ಈಕೆಯ ಬರಹದಲ್ಲಿ ಗಂಡಸಿನ ಮನೋಭಾವನೆ, ವ್ಯಕ್ತಿತ್ವದ ಬಗ್ಗೆ ಕೂಡಾ ಚೆನ್ನಾಗಿ ಚಿತ್ರಣ ಮೂಡಿ ಬರುತ್ತದೆ. 'ದೋಜಾಕ', ಮತ್ತು 'ಬದನ್ ಕೀ ಖುಷ್‌ಬು' ಕೃತಿಗಳಲ್ಲಿ ವಿಲ ವಿಲನೇ ಒದ್ದಾಡುವ, ಪರದಾಡುವ, ಪರಿತಪಿಸುವ ಗಂಡಸಿನ ವ್ಯಕ್ತಿತ್ವವನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾಳೆ.

ಇಸ್ಮತ್ ಹೆಣ್ಣು ಪುರುಷರನ್ನು ಅನುಕರಣೆ ಮಾಡಬೇಕು ಅಂತಲೋ ಪ್ರತಿಭಟಿಸಬೇಕು ಅಂತ ಹೇಳುವ ಬದಲು, ಹೆಣ್ಣು ತನ್ನನ್ನು ತಾನು ಅರ್ಥ ಮಾಡಿಕೊಳ್ಳುವುದರಲ್ಲಿ, ಕಂಡುಕೊಳ್ಳುವುದರಲ್ಲಿ ಜಯವಿದೆ ಎನ್ನುತ್ತಾಳೆ.

ಹಾಗಾಗಿ ಆಕೆ ತನ್ನ ಬಗ್ಗೆ ಹೀಗೆ ಹೇಳಿಕೊಳ್ಳುತ್ತಾಳೆ:

"ಇದು ನನ್ನ ಜೀವನ, ನನ್ನ ಆಸೆ, ಆಕಾಂಕ್ಷೆಗಳು, ಬೇಡಿಕೆಗಳನ್ನು ನನ್ನದೇ ಆದ ರೀತಿಯಲ್ಲಿ ನಾನು ಎದುರಿಸುತ್ತೇನೆ, ಹೊರತು ಇದರ ಆಪಾದನೆಯನ್ನು ಯಾರ ಮೇಲೂ ಹೊರಿಸುವುದಿಲ್ಲ".

ಇಸ್ಮತ್ ಕಥಾ ಸಾಹಿತ್ಯದ ಆಳವಾದ ವಿಮರ್ಶೆಯ ಅಗತ್ಯವಿದೆ ಎಂದು ನನ್ನ ಅನಿಸಿಕೆ. ಏಕೆಂದರೆ ಮಾನವೀಯ ಕಾಳಜಿಗಳ ದೃಷ್ಟಿಕೋನ ಅವಳ ಕಲಾಕೃತಿಗಳಲ್ಲಿ ತುಂಬಿ ತುಳುಕುತ್ತವೆ. ಹೆಸರಾಂತ ವಿಮರ್ಶಕ ವಾರಿಸ್ ಅಲ್ವಿ ಹೇಳುತ್ತಾರೆ:

"ಇಸ್ಮತ್‌ಳ ಕೃತಿಗಳನ್ನು ಓದಿದ ಯಾವುದೇ ಮನುಷ್ಯ ಓದುವ ಮುಂಚೆ ಹೇಗಿರುತ್ತಾನೋ, ಹಾಗೇ ಇರುವುದಿಲ್ಲ. ಓದಿದ ನಂತರ ಸಂಪೂರ್ಣ ಬದಲಾಗುತ್ತಾನೆ".

ಇಸ್ಮತ್ ಯಾವ ಸ್ತ್ರೀವಾದಿ ಸಿದ್ಧಾಂತಗಳನ್ನೂ ಬರೆದವಳಲ್ಲ. ಆದಾಗ್ಯೂ ಪಾಶ್ಚಾತ್ಯ ಸ್ತ್ರೀ ವಿಚಾರಧಾರೆಗಳು ಹೇಳುತ್ತಿರುವ ಸಂಗತಿಗಳನ್ನು ಈಕೆ 1942 ರಲ್ಲಿಯೇ ತನ್ನ ಕೃತಿಗಳ ಮೂಲಕ ಹೇಳಿದ್ದದು ಆಕೆಯ ವೈಶಿಷ್ಟ್ಯ, ಕಾಳಜಿ ಬದ್ಧತೆಯನ್ನು ಬಿಂಬಿಸುತ್ತವೆ.

ಸಿಮೆನ್ ದಿ ಬುವಾ ಹೇಳುವಂತೆ:

'ಹೆಣ್ಣು ಹೆಣ್ಣಾಗಿ ಹುಟ್ಟಲಿಲ್ಲ, ಆದರೆ ಅವಳು ಮಾಡಲ್ಪಟ್ಟಿದ್ದಾಳೆ'

ಇಸ್ಮತ್ ನಡೆದ ಹಾದಿ ಭಿನ್ನವಾಗಿತ್ತು. ಒಬ್ಬ ಹೆಣ್ಣಾಗಿ, ಲೇಖಕಿಯಾಗಿ ಆಕೆ ಹಾಕಿದ ಹೆಜ್ಜೆಗಳು ಸ್ವತಂತ್ರವಾಗಿದ್ದವು.

"ನನ್ನ ದಾರಿ ನಾನೇ ಕಂಡುಕೊಳ್ಳುತ್ತೇನೆ. ಯಾರೋ ಮಾಡಿರುವ ರೆಡಿಮೇಡು ಲಾಡುಗಳನ್ನು ನಾನು ಯಾವತ್ತು ತಿನ್ನುವುದಿಲ್ಲ".

ಇಸ್ಮತ್ ನಮ್ಮೆಲ್ಲರ ಭರವಸೆಯ ಸಂಕೇತವಾಗಿದ್ದಾಳೆ.

ಉರ್ದು ಸಾಹಿತ್ಯದ ಹೆಸರಾಂತ ಲೇಖಕಿ **ಖುರಾತುಲ್ ಐನ್ ಹೈದರ್** ಇಸ್ಮತ್‌ಳನ್ನು 'ಲೇಡೀ ಚಂಘೀಸ್ ಖಾನ್' ಎಂದು ಕರೆಯುತ್ತಾರೆ. ಈ ಪ್ರಶಂಸೆ ಇಸ್ಮತಳ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುವಂತಿದೆ. •

ವೇಶ್ಯಾವೃತ್ತಿಯ ವಿಭಿನ್ನ ವಿಶ್ವ

ಅನುಲಕ್ಷ್ಮಿ

"ಮನೆಯಲ್ಲಿ ಅಜ್ಜಿ ಯಾವಾಗಲೂ ಹೇಳುತ್ತಿದ್ದಳು 'ನೋಡು ರೆಷೂ, ಮನೆ ಬಿಟ್ಟು ಮಾತ್ರ ಹೊರಗೆ ಹೋಗಬೇಡ. ಚಿಕ್ಕ ಹುಡುಗಿಯರನ್ನು ಒಯ್ದು ಮಾರಿ ಬಿಡುತ್ತಾರೆ'. ಆಗ ನಾನು ನಕ್ಕು ಹೇಳುತ್ತಿದ್ದೆ. 'ನಾನೇನೂ ತರಕಾರಿಯೇ ಮಾರಲು? ನನ್ನನ್ನು ಇಟ್ಟುಕೊಂಡು ಅವರೇನು ಮಾಡ್ತಾರೆ 'ಎನ್ನುತ್ತಿದ್ದೆ. ಹುಡುಗಿಯರನ್ನು ಬಾಂಬೆಯಲ್ಲಿ ಮಾರಾಟ ಮಾಡುತ್ತಾರೆ ಎಂದು ಮನೆಯಲ್ಲಿದ್ದವರಿಗೆ ತಿಳಿದಿತ್ತು. ಆದರೆ ಅವರನ್ಯಾಕೆ ಮಾರಲಾಗುತ್ತದೆ ಎಂದು ಯಾರೂ ಬಹಿರಂಗವಾಗಿ ಹೇಳುತ್ತಿರಲಿಲ್ಲ. ಇದರ ಬಗ್ಗೆಲ್ಲಾ ನಾನು ನಕ್ಕು ಬಿಡುತ್ತಿದ್ದೆ.

ಮನೆಯಲ್ಲಿ ಜಗಳ ಮಾಡಿಕೊಂಡು ಸೊಲ್ಲಾಪುರದಿಂದ ಮುಂಬೈಗೆ ಓಡಿಬಂದ ಮುಗ್ಧ ಬಾಲೆ ರಜಿಯಾ ನೆನಪಿಸಿಕೊಳ್ಳುವ ಸಂಗತಿ ಇದು. ಮನೆಯಲ್ಲಿ ಜಗಳ ಮಾಡಿಕೊಂಡಾಗಲೆಲ್ಲಾ ಮನೆ ಬಿಟ್ಟು ಹೋಗುತ್ತೇನೆ ಎಂಬಂತಹ ಮಾತುಗಳನ್ನು ರಜಿಯಾ ಯಾವಾಗಲೂ ಹೇಳುತ್ತಿದ್ದಳು. ಮನೆಯಲ್ಲಿದ್ದವರು ಯಾರೂ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಆದರೆ ಒಂದು ದಿನ ರಾತ್ರಿ ಜಗಳ ಮಾಡಿಕೊಂಡು ಮನೆ ತೊರೆದು ನಿಂತಿದ್ದ ರೈಲು ಹತ್ತಿದಳು. ಈ ರೈಲು ಬೆಳಿಗ್ಗೆ ತಲುಪಿದ್ದು ಮುಂಬೈಗೆ. ಕೋಪದ ಭರದಲ್ಲಿ ಮನೆ ಬಿಟ್ಟು ಬಂದಿದ್ದ ಹುಡುಗಿ ಕಡೆಗೆ ಗೊತ್ತಿಲ್ಲದಂತೆಯೇ ಸಿಲುಕಿಕೊಂಡಿದ್ದು ವೇಶ್ಯಾವಾಟಿಕೆಯ ಜಾಲದಲ್ಲಿ. ಈಗ 19 ವರ್ಷದ ಈ ಯುವತಿ ಎಚ್ ಐ ವಿ ಸೋಂಕಿಗೆ ಗುರಿಯಾಗಿದ್ದಾಳೆ. ಕೊಲ್ಕೊತ್ತಾದಲ್ಲಿರುವ ಸನ್‌ಲಾಪ್ ಆಶ್ರಯತಾಣದಲ್ಲೀಗ ಈಕೆ ದಿನಗಳನ್ನು ದೂಡುತ್ತಿದ್ದಾಳೆ.

ಮುಂಬೈನ 'ಪಾಯಿಂಟ್ ಆಫ್ ವ್ಯೂ' ಮಹಿಳಾ ಸಂಘಟನೆ ಹೊರ ತಂದಿರುವ 'ಅನ್‌ಝಿಪ್ಡ್' ಪುಸ್ತಕದಲ್ಲಿ ಈ ಹುಡುಗಿ ತನ್ನ ಈ ಕಥೆಯನ್ನು ಹೇಳಿಕೊಂಡಿದ್ದಾಳೆ. 'ಅನ್‌ಝಿಪ್ಡ್' ವೇಶ್ಯಾವೃತ್ತಿಯಲ್ಲಿರುವ ಮೂವರು ಮಹಿಳೆಯರು ಹಾಗೂ ಇಬ್ಬರು ಪುರುಷರ ದನಿಗಳನ್ನು ದಾಖಲಿಸುತ್ತದೆ. ಸಾರ್ವಜನಿಕ ಆರೋಗ್ಯ ಹಾಗೂ ವೇಶ್ಯಾವಾಟಿಕೆಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಾಂಗ್ಲಿಯ 'ಸಂಗ್ರಾಮ್' ಹಾಗೂ ಕೊಲ್ಕೊತ್ತಾದ "ದರ್ಬಾರ್ ಮಹಿಳಾ ಸಮನ್ವಯ ಸಮಿತಿ" (ಡಿಎಂಎಸ್‌ಸಿ) -ಯ ಜತೆಗೆ ಕೆಲಸ ಮಾಡುವ ಸಂದರ್ಭದಲ್ಲಿ ಈ ವ್ಯಕ್ತಿಗಳು, ಅವರಿಗೆ ಪರಿಚಯವಾದರು. ಪುಸ್ತಕದಲ್ಲಿ ಬರುವ ಉಮಾ, ಶಬಾನಾ ಹಾಗು ಭಾಸ್ಕರನ ಪಾತ್ರಗಳಿಗೆ ಗಮನ ಕೇಂದ್ರೀಕರಿಸಿ 'ಇನ್ ದಿ ಫ್ಲೆಷ್' ಎಂಬ 50 ನಿಮಿಷಗಳ ಸಾಕ್ಷ್ಯಚಿತ್ರವನ್ನು 'ಪಾಯಿಂಟ ಆಫ್ ವ್ಯೂ' ಸಂಘಟನೆಯ ವಿಶಾಖಾ ದತ್ತಾ ನಿರ್ದೇಶಿಸಿದ್ದಾರೆ. ಮುಖ್ಯವಾಹಿನಿಯಿಂದ ಬೇರ್ಪಟ್ಟ ವೇಶ್ಯಾವೃತ್ತಿಯ ಬದುಕನ್ನು ಒಬ್ಬೊಬ್ಬರೂ ಅರ್ಥೈಸಿಕೊಳ್ಳುವ ಪರಿಯೇ ಭಿನ್ನವಾದದು. ಇದರಲ್ಲೇ ನೆಲಸುವವರಿಗೆ ಇದು ರೂಪಿಸುವ, ತಿದ್ದುವ ಹಾಗೂ ಬದಲಾಗುತ್ತಾ ಸಾಗುವ ಮೌಲ್ಯಗಳ ಪ್ರತ್ಯೇಕ ವ್ಯವಸ್ಥೆಯೇ ಆಗಿಬಿಡಬಹುದು. ರಜಿಯಾಗೆ ಈ ವಿಶ್ವ ಯಾರನ್ನೂ ನಂಬದಿರಲು, ಏನನ್ನೂ ನಿರೀಕ್ಷಿಸದಿರಲು, ಆದರೆ ಪ್ರತಿದಿನವನ್ನು ಬಂದಂತೆ ಸ್ವೀಕರಿಸುವಂತಹ ಮನೋಧರ್ಮವನ್ನು ಕಲಿಸಿದೆ. 'ಬದುಕಲ್ಲಿ ಕೆಲವು ಪೆಟ್ಟುಗಳು ಬಿದ್ದಾಗಲೇ ಕಲಿಯುವುದು' ಎಂಬ ಕಟುಸತ್ಯವನ್ನು ಈ ಎಳೆ ಹುಡುಗಿ ಈಗ ಅರ್ಥ ಮಾಡಿಕೊಂಡಿದ್ದಾಳೆ.

ಗಡಿ ಹೆದ್ದಾರಿಗಳಲ್ಲಿ ದಂಧೆ ನಡೆಸುವ ಶಬಾನಾಳ ಅನುಭವವೇ ಬೇರೆ. ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವಂತಹ ಕಟು ವಾಸ್ತವಗಳ ಅನುಭವ ಆಕೆಯದು. ವೇಶ್ಯೆಯೊಳಗಿರುವ 'ತನ್ನತನ'ವನ್ನು ಪ್ರತ್ಯೇಕಿಸುವ ಹೋರಾಟ ಆಕೆಯದು.

ಪೊಲೀಸನ ಮಗಳಾಗಿ, ಮಲತಾಯಿಯ ದೌರ್ಜನ್ಯದಿಂದ ಈ ದಂಧೆಯನ್ನು ಆರಿಸಿಕೊಂಡ ಶಬಾನಾ 'ನಾನು ಸಂತೋಷ ಏನೆಂಬುದನ್ನೇ ಕಂಡಿಲ್ಲ. ಈಗಲೂ ನಾನು ಸಂತೋಷವಾಗಿಲ್ಲ' ಎನ್ನುತ್ತಾಳೆ.

'ಹೆಣ್ಣಾಗಿ ಮತ್ತೆ ಹುಟ್ಟಲು ನನಗೆ ಇಷ್ಟವಿಲ್ಲ. ಯಾತನಾಮಯವಾದ ಬದುಕು ಇದು.ತಾಯಿಯದಾಗಲಿ, ತಂದೆಯದಾಗಲೀ ಪ್ರೀತಿ ಸಿಗಲಿಲ್ಲ. ಸೋದರ, ಸೋದರಿ ಪ್ರೀತಿ ಹೇಗಿರುತ್ತದೆ ಎಂಬುದೂ ನನಗೆ ಗೊತ್ತಿಲ್ಲ ಎಂದು ಶಬಾನಾ ಹೇಳುತ್ತಾಳೆ.

"ತಂಗಿಯನ್ನು ಮಲತಾಯಿ ಬೆಂಕಿ ಹಚ್ಚಿಕೊಂದಳು. ಸ್ಟೋವ್ ಸಿಡಿದು ಸತ್ತು ಹೋದಳು" ಎಂದು ಪೊಲೀಸರಿಗೆ

ಸುಳ್ಳು ಹೇಳಿಕೆ ನೀಡಿದಳು. ಅಷ್ಟು ಸಾಲದೆಂಬಂತೆ ಹಣ ಕದ್ದಿರುವ ಆರೋಪವನ್ನು ಶಬಾನಾ ಮೇಲೆ ಹೊರಿಸಿದಳು. ವಾಸ್ತವವಾಗಿ ಆ ಹಣವನ್ನು ಆಕೆ ತನ್ನ ತಾಯಿಗೆ ಕೊಟ್ಟುಕೊಂಡಿದ್ದಳು. "ಆದರೆ ನನ್ನ ತಂದೆ ಪೊಲೀಸ್ ಲಾಠಿ -ಯಿಂದ ಇಡೀ ಮೂರು ಗಂಟೆ ಕಾಲ ಹೊಡೆದ...." ಎಂದು ಶಬಾನಾ ಹೇಳಿಕೊಂಡಿದ್ದಾಳೆ. ಆ ರಾತ್ರಿಯೇ ಶಬಾನಾ ಮನೆ ಬಿಟ್ಟಿದ್ದು.

ಹೆದ್ದಾರಿಯ ಬಯಲುಗಳಲ್ಲಿ, ಟ್ರಕ್‌ಗಳಲ್ಲಿ ಶಬಾನಾ ವ್ಯವಹಾರ ಇದೆ. 'ಅವರು ಬರ್ತಾರೆ, ಹೋಗ್ತಾರೆ. ಲೆಕ್ಕಕ್ಕೇ ಸಿಗುವುದಿಲ್ಲ' ಎನ್ನುವ ಶಬಾನಾ ಪ್ರೇಮದಲ್ಲಿ ಸಿಲುಕಿಕೊಳ್ಳುವುದು ಭೀತಿ ಹುಟ್ಟಿಸುವ ಭಾವನೆ ಎನ್ನುತ್ತಾಳೆ. ಕೆಲವು ಗಿರಾಕಿಗಳು ಮದುವೆಯಾಗುವ ಭರವಸೆಯನ್ನು ನೀಡುತ್ತಾರೆ. ಆದರೆ ಲಕ್ಷಾಂತರ ಪುರುಷರು ವಿವಾಹವಾದ ಮೇಲೆ ತಮ್ಮ ಪತ್ನಿಯರನ್ನು ಬಿಟ್ಟು ಬಿಡುವ ಸನ್ನಿವೇಶ ಇರುವಾಗ ಇನ್ನು ನಮ್ಮ ಕಥೆ ಏನು ? ಎಂದು ಶಬಾನಾ ಪ್ರಶ್ನಿಸುತ್ತಾಳೆ.

"ದಂಧೆ ಕೆಟ್ಟದ್ದು ಎಂದು ಸರ್ಕಾರ ಭಾವಿಸುತ್ತದೆ... ಆದರೆ ಚಿತ್ರತಾರೆಯರ ಬಗ್ಗೆ ಏನು ಹೇಳುತ್ತೀರಿ. ಚಲನಚಿತ್ರಗಳಲ್ಲಿ ಎಷ್ಟೊಂದು ಲೈಂಗಿಕತೆ ತೋರಿಸುತ್ತಾರೆ. ಚಿತ್ರಗಳು, ಸ್ವಲ್ಪ ಯೋಚಿಸಿ. ಅದೂ ದಂಧೇಯೇ. ನಾಯಕ, ನಾಯಕಿ ಹಣ ತೆಗೆದುಕೊಂಡು ಬಹಿರಂಗವಾಗಿ ಲೈಂಗಿಕತೆ ಪ್ರದರ್ಶಿಸುತ್ತಾರೆ..... ಅದೂ ಕೆಟ್ಟದ್ದೇ. ಅವರೇನು ವಿಭಿನ್ನರೆ?" ಎಂಬ ಪ್ರಶ್ನೆ ಶಬಾನಾದು. ಶಬಾನಾಳ ಮಗಳು ಸಲ್ಮಾಗೆ ತಾಯಿ ದಂಧೆಯಲ್ಲಿರುವುದು ತಿಳಿದಿದೆ. "ಅವಳನ್ನು, ಅವಳ ತಂದೆಯನ್ನು ಈ ದಂಧೆಯ ಗಳಿಕೆಯಿಂದಲೇ ಸಾಕಿದ್ದೇನೆ ಎಂಬುದೂ ಅವಳಿಗೆ ತಿಳಿದಿದೆ. ಆಕೆ ಹೈಸ್ಕೂಲ್‌ನಲ್ಲಿದ್ದು, ಟೈಲರಿಂಗ್ ಕಲಿಯುತ್ತಿದ್ದಾಳೆ. ಆಕೆ ಗೌರವಾನ್ವಿತ ಬದುಕನ್ನು ಸಾಗಿಸಲಿದ್ದಾಳೆ " ಎಂಬುದು ಶಬಾನಾ ನುಡಿ.

ನಮ್ಮ ಹಣಕ್ಕೆ 'ಊರ್ಜಿತವೇ ಇಲ್ಲ. 1 ಲಕ್ಷ ಗಳಿಸಿದರೂ ಬೆಳಗಿನ ಚಹಾಗೆ ದುಡ್ಡು ಇರುವುದಿಲ್ಲ. ಅದು ಇರುವುದು ಹಾಗೆಯೇ. ಹೊಲದಲ್ಲಿ ಗೇದು ಗಳಿಸುವ 20 ರೂಪಾಯಿ ಎಂಟು ದಿನಗಳ ಕಾಲ ಬರುತ್ತದೆ. ಬೀಡಿವಾಲಾಗಳೇ ಎಂಟು ದಿನದಲ್ಲಿ 100 ರೂ ಗಳಿಸುತ್ತಾರೆ. ಅದರಲ್ಲೇ ಅವರು ಬದುಕುತ್ತಾರೆ. ಪ್ರತಿದಿನ ನಾನು 100, 200 ಅಥವಾ 500 ರೂ ಗಳಿಸುತ್ತೇನೆ. ಆದರೆ ಪ್ರತಿ ಬೆಳಿಗ್ಗೆಯೂ ನನ್ನ ಬಳಿ ಹಣ ಇರುವುದಿಲ್ಲ" ಎಂದೂ ಶಬಾನಾ ತಮ್ಮೆಲ್ಲರ ಬದುಕಿನ ಕ್ಷಣಿಕತೆಗೆ ಕನ್ನಡಿ ಹಿಡಿಯುತ್ತಾಳೆ.

ವೇಶ್ಯಾವೃತ್ತಿಯಲ್ಲಿರುವವರು ಬರೀ ಮಹಿಳೆಯರು ಮಾತ್ರ ಎಂಬ ಪರಿಕಲ್ಪನೆಯನ್ನು ಭಾಸ್ಕರನ ಕಥಾನಕ ಹುಸಿಗೊಳಿಸುತ್ತದೆ. ಇತರ ಪುರುಷರಿಗೆ ಲೈಂಗಿಕತೆ ಮಾರಾಟ ಮಾಡುವ ಕೊಲ್ಕತ್ತಾದ ಭಾಸ್ಕರನಿಗೆ ಹಿಜಡಾ ಆಗಿ ಹಣ ಗಳಿಕೆಗೆ ಹೆಚ್ಚಿನ ಮಾರ್ಗಗಳೂ ಇರಲಿಲ್ಲ. ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಭಾಸ್ಕರನಿಗೆ ತಾಯಿ ಮತ್ತು ಸೋದರಿ ಇದ್ದಾರೆ. ಇರಲು ಮನೆಯಿದೆ. ಬಾಡಿಗೆಗೂ ಮನೆಗಳನ್ನು ಕೊಟ್ಟಿದ್ದಾರೆ. ಸೋದರಿ ಆಸ್ಪತ್ರೆಯೊಂದರಲ್ಲಿ ನರ್ಸ್ ಆಗಿ ದುಡಿಯುತ್ತಿದ್ದಾಳೆ.

ತನ್ನ ಗಿರಾಕಿಗಳು 'ಚಿನ್ನದ ಮೊಟ್ಟೆಗಳನ್ನಿಡುವ ಚಿನ್ನದ ಕೋಳಿಗಳು' ಎಂದು ಕರೆಯುವ ಭಾಸ್ಕರ್, ಬದುಕಿನಲ್ಲಿ ಸಂತೋಷ ಪಡುವುದನ್ನು ಕಲಿತಿರುವುದಾಗಿಯೂ ಹೇಳಿಕೊಳ್ಳುತ್ತಾನೆ. ತನ್ನ ಇಬ್ಬರು ಪ್ರೀತಿಯ 'ಪ್ರಿಯಕರ'ರ ಪ್ರೇಮದ ಉದಾರತೆಯನ್ನು ವಿವರಿಸುತ್ತಾನೆ. 'ಅವರನ್ನು ಪ್ರೀತಿಸುತ್ತೇನೆ' ಎಂದೂ ಈ ಉದ್ದ ಕೂದಲಿನ ಹುಡುಗ ಹೇಳುತ್ತಾನೆ. 'ಅವರ ಜತೆ ನಾನೇಕೆ ಮೂರು ಗಂಟೆ ಅಥವಾ ಕೆಲವೊಮ್ಮೆಯಂತೂ ಆರು ಗಂಟೆಗಳ ಕಾಲ ಇರಬೇಕು ? ಇದು ಪ್ರೀತಿಯಲ್ಲದೆ ಬೇರೇನು ? ಆದರೆ ಅವರು ನನ್ನನ್ನು ಪ್ರೀತಿಸುತ್ತಾರಾ ಎಂದು ನಾನೆಂದೂ ಕೇಳಿಲ್ಲ. ಏಕೆಂದರೆ ನಾನು ಕೇಳಿದಲ್ಲಿ ನನ್ನ ಗಿರಾಕಿ ಗಿರಾಕಿಯಾಗಿ ಉಳಿಯುವುದಿಲ್ಲ. ಲೈಂಗಿಕತೆಗೆ ಹಣ ನೀಡದೆ ಹೋಗಲು ಪ್ರೀತಿಯ ನೆಪ ಬಳಸಿಕೊಳ್ಳಬಹುದು. ಇದು ನನಗಿಷ್ಟವಿಲ್ಲ. ಚಿನ್ನದ ಮೊಟ್ಟೆ ಹಿತ್ತಾಳೆಯಾಗುವುದು ಬೇಡ' ಎಂದು ಭಾಸ್ಕರ ಹೇಳುತ್ತಾನೆ.

ಈಗ ದಂಧೆಯನ್ನು ನಿಲ್ಲಿಸಿದ್ದರೂ ಕೊಲ್ಕೊತ್ತಾದ ಕೆಂಪುದೀಪ ಪ್ರದೇಶ ಬೌಬಜಾರ್‌ನಲ್ಲಿ ತನ್ನ ವಾಸ ಮುಂದುವರಿಸಿರುವ ಉಮಾ ಬಂಗಾಳದ ಜಾತ್ರಾ (ಜಾನಪದ ರಂಗಭೂಮಿ) ಕಲಾವಿದೆ. ಕತ್ತಲ ಬದುಕಲ್ಲಿ ಪದ್ಯ ಬರೆಯುವವಳು ಈಕೆ. "ಒಮ್ಮೆ ಭರವಸೆಯ ಹೂಗಳ ಹಾರವನ್ನು ಕಟ್ಟಿದವಳು. ಆದರೆ ಒಣಗಿದ ಹಾರ ಧೂಳಿನಲ್ಲಿ ಹೊರಳಾಡುತ್ತಿದೆ. '....ನಾನು ಇತರರಿಗಾಗಿ ಬರೆಯುವುದಿಲ್ಲ. ಇದೆಲ್ಲಾ ನನಗಾಗಿ' ಎಂದು ಉಮಾ ಹೇಳಿಕೊಳ್ಳುತ್ತಾಳೆ.

2001 ರಲ್ಲಿ ಕೊಲ್ಕೊತ್ತಾದಲ್ಲಿ ದರ್ಬಾರ್ ಮಹಿಳಾ ಸಮನ್ವಯ ಸಮಿತಿ (ಡಿಎಂಎಸ್‌ಸಿ) ನಡೆಸಿದ ಮೇಳದಲ್ಲಿ ಹೊಂದಿದ ಬಾಂಧವ್ಯದ ಫಲವಾಗಿ, ಉಮಾ ತನ್ನ ಕಥಾನಕವನ್ನು ಹೇಳಲು ಹಾಗೂ 'ಇನ್ ದ ಫ್ಲೆಷ್' ಚಿತ್ರದ ಚಿತ್ರೀಕರಣಕ್ಕೆ ಒಪ್ಪಿಕೊಂಡಳು. ಆದರೆ ಮನೆಯಲ್ಲಿ ತನ್ನ ಕೋಣೆಯಲ್ಲಿ ಮಾತ್ರವೇ ಚಿತ್ರೀಕರಣ ನಡೆಯಬೇಕು ಎಂಬಂತಹ ಶರತ್ತನ್ನು ಉಮಾ ವಿಧಿಸಿದ್ದಳು. ಆಕೆ ತನ್ನ ಇತರ ಸಹವರ್ತಿಗಳ ಖಾಸಗೀತನದ ಬಗ್ಗೆ ಹೊಂದಿದ್ದ ಕಾಳಜಿಗೆ ಪ್ರತೀಕ ಇದು.

ಉಮಾ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಮಕ್ಕಳೆಲ್ಲಾ 10 ವರ್ಷಗಳಾಗುವ ಮೊದಲೇ ಸಾಯುತ್ತಿದ್ದರು. ಉಮಾ ವಿಷಯದಲ್ಲಿ ಇದನ್ನು ಸುಳ್ಳಾಗಿಸಲು ಹಲವು ಆಚರಣೆಗಳನ್ನು ನಡೆಸಲಾಯಿತು. ಜತೆಗೆ ಕುಟುಂಬವನ್ನೇ ಬದಲಾಯಿಸಲು ನಾಲ್ಕನೇ ವಯಸ್ಸಿಗೆ ಮದುವೆ ಮಾಡಿ ಬಿಡಲಾಯಿತು. ಆಕೆಯ ಪತಿಗೆ ಆಗ 18 ವರ್ಷ. ಅತ್ತೆಯ ಪ್ರೀತಿ ಧಾರಾಳವಾಗಿ ದೊರಕಿತ್ತು. ಆದರೆ ದುರದೃಷ್ಟವಶಾತ್ ಸ್ವಲ್ಪ ವರ್ಷಗಳಲ್ಲಿಯೇ ಅತ್ತೆ ತೀರಿಕೊಂಡ ನಂತರ ಉಮಾ ಅನಾಥೆಯಾದಳು. ಪತಿಯಿಂದ ಪರಿತ್ಯಕ್ತೆಯಾದಳು. 'ನನ್ನ ಅತ್ತೆ, ನನ್ನ ತಾಯಿಯಷ್ಟೇ ಕಾಲ ಬದುಕಿದ್ದಿದ್ದರೆ ಅಥವಾ ಅತ್ತೆಯ ಬದಲಿಗೆ ತಾಯಿ ಸತ್ತಿದ್ದಿದ್ದರೆ ದುಃಖವಾಗುತ್ತಿರಲಿಲ್ಲ. ಈ ದಂಧೆಗೆ ಬೀಳುವ ಅವಶ್ಯಕತೆಯೂ ಬೀಳುತ್ತಿರಲಿಲ್ಲ' ಎಂದೂ ಉಮಾ ಹೇಳಿಕೊಂಡಿದ್ದಾಳೆ.

ಜಾತ್ರಾ, ಕಲಾವಿದೆಯಾಗಿಯೂ ಬದುಕು ಸಾಗಿಸಬಹುದಿತ್ತೇನೋ. ಆದರೆ ಪೂರ್ಣ ಪ್ರಮಾಣದಲ್ಲಿ ನಟನೆಯನ್ನು ವೃತ್ತಿಯಾಗಿ ಸ್ವೀಕರಿಸುವುದು ಸಾಧ್ಯವಾಗಲಿಲ್ಲ. ಕಾರಣ? ಉಮಾಗೆ ಇರಲು ಒಂದು ಮನೆ ಪಡೆದುಕೊಳ್ಳುವುದೇ ಕಷ್ಟವಾಯಿತು. 15, 16ರ ಯುವತಿಗೆ ಕುಟುಂಬಸ್ಥರ ಮನೆಯಲ್ಲಿ ಮನೆ ಸಿಗುವುದಂತೂ ಕನಸಿನ ಮಾತಾಯಿತು. ಮನೆಯ ಯಜಮಾನ ಒಪ್ಪಿದರೂ ಮನೆಯ ಯಜಮಾನಿ ಒಪ್ಪುತ್ತಿರಲಿಲ್ಲ. ಒಂದು ಕೋಣೆಯೂ ಸಿಗದಿದ್ದುದೂ ಈ ದಂಧೆಗೆ ಬೀಳುವುದಕ್ಕೆ ಮೆಟ್ಟಿಲಾಯಿತು ಎಂದೂ ಉಮಾ ಹೇಳುತ್ತಾಳೆ.

'ಸರ್ಕಾರವೂ ನಮ್ಮ ವೃತ್ತಿಗೆ ನಿಷೇಧ ಹೇರಿಲ್ಲ. ಆದರೆ ಅನುಮತಿಯನ್ನೂ ನೀಡಿಲ್ಲ' ಎನ್ನುವ ಉಮಾ "ಗಿರಾಕಿಗಳನ್ನು ಸೆಳೆಯುವುದನ್ನು ಮಾತ್ರ ತಪ್ಪು ಎನ್ನಲಾಗುತ್ತದೆ. ಆದರೆ ಮನೆಯಲ್ಲಿ ಕುಳಿತರೆ ನಮ್ಮ ಬಳಿ ಯಾರು ಬರುತ್ತಾರೆ" ಎಂದು ಪ್ರಶ್ನಿಸುತ್ತಾಳೆ.

ವೇಶ್ಯಾವಾಟಿಕೆಗೆ ಗಿರಾಕಿಯಾಗಿ ಬರುತ್ತಿದ್ದಾತ ಆ ಪ್ರಪಂಚದೊಳಗಿನವನೇ ಒಬ್ಬನಾದದ್ದು ಮೋಹನನ ಕಥೆ. ಉಮಾಳನ್ನು ನಿಯಮಿತವಾಗಿ ಅರಸಿ ಬರುತ್ತಿದ್ದ ಆತ ಈಗ ಆಕೆಯ ಸಂಗಾತಿಯೇ ಆಗಿ ಹೋಗಿದ್ದಾನೆ. ಹೆಸರಿಲ್ಲದ ಈ ಸಂಬಂಧದ ಸೂಕ್ಷ್ಮಗಳನ್ನು ಮೋಹನ ನಿರೂಪಿಸುತ್ತಾನೆ.

ವೇಶ್ಯೆಯರನ್ನು ವೈಭವೀಕರಿಸುವುದಾಗಲಿ ಅಥವಾ ಅಸಹಾಯಕ ಬಲಿಪಶುಗಳಾಗಿ ಚಿತ್ರಿಸುವುದಾಗಲಿ ಈ ಪುಸ್ತಕ ಹಾಗೂ ಚಿತ್ರದ ಉದ್ದೇಶವಲ್ಲ. ವೇಶ್ಯೆಯೊಳಗಿನ ವ್ಯಕ್ತಿತ್ವವನ್ನು ಹೊರಗಿಡಹುವುದು ಇಲ್ಲಿನ ಮುಖ್ಯ ಉದ್ದೇಶ. ಇದಕ್ಕೆ ಪೂರಕವಾಗಿ ಉಮಾಳ ಬದುಕಿನ ಅನುಭವವನ್ನೊಂದನ್ನು ಪರಿಗಣಿಸ ಬಹುದು. ವೇಶ್ಯೆಯರೆಂದರೆ ಬರೀ ಬಲಿಪಶುಗಳು ಮಾತ್ರವೇ ಅಲ್ಲ. ತಮ್ಮದೇ ಕೆಲವು ರಕ್ಷಣಾತ್ಮಕ ಕ್ರಮಗಳನ್ನು ಅಳವಡಿಸಿಕೊಳ್ಳುವ ಗಟ್ಟಿತನ ಈ ಮಹಿಳೆಯರಿಗಿದೆ ಎಂಬುದನ್ನೂ ಈ ಅನುಭವ ನಿರೂಪಿಸುತ್ತದೆ. ಸ್ಥಳೀಯ ಗೂಂಡಾಗಳಿಂದ ರಕ್ಷಿಸಿಕೊಳ್ಳುವ ಸಂದರ್ಭಗಳು ಉಮಾಗೆ ಎದುರಾಗುತ್ತದೆ. ಇದನ್ನು ಪ್ರತಿರೋಧಿಸಲು ಆಕೆ ಹುಡುಕಿಕೊಳ್ಳುವ ಮಾರ್ಗ ಹೊಸತನದ್ದು. ತನ್ನ ಸೀರೆಯ ಸೆರಗಿನ ಬೀಗದ ಕೈಗೊಂಚಲು ಕಟ್ಟಿಕೊಂಡು ಶತ್ರುವಿನ ಮುಖದೆದುರು ಆಕೆ ಗಿರಗಿರನೆ ತಿರುಗಿಸುವ ಪರಿಯೇ ಅಸ್ತ್ರವಾಗುತ್ತದೆ. ಬೀಗದ ಕೈಗೊಂಚಲನ್ನೇ ಅಸ್ತ್ರವಾಗಿ ಬಳಸುವ ಈ ವಿಧಾನ ಆಕೆಯಲ್ಲಿ ಅಂತರ್ಗತವಾಗಿರುವ ಸಶಕ್ತೀಕರಣದ ಅಂಶವನ್ನು ಬಯಲಾಗಿಸುತ್ತದೆ.

ಉಮಾ 'ಮ್ಯಾಡಮ್' ಆಗಿ ಹೊಸ ಹುಡುಗಿಯರನ್ನೂ ದಂಧೆಗಿಳಿಸುವುದು ಬೇಡ ಎಂಬುದು ಈಗ ಉಮಾಳ ಸಂಗಾತಿಯಾಗಿರುವ ಮೋಹನನ ಉಪದೇಶ. ಬದುಕಿನ ಸಂಜೆಯಲ್ಲಿ ಈ ತತ್ವಕ್ಕೆ ಉಮಾ ಬದ್ಧಳಾಗಿದ್ದಾಳೆ.

ಶಬಾನಾಳನ್ನೂ ಮಹಿಳೆಯರ ನಾಯಕಿಯಾಗಿ ಪರಿಗಣಿಸಲಾಗಿದೆ. ಈ ವರ್ಷ ಜನವರಿ ತಿಂಗಳಲ್ಲಿ ಏಯ್ಡ್ಸ್ ಜಾಗೃತಿ ಆಂದೋಲನವನ್ನೂ ನಡೆಸುವುದಕ್ಕಾಗಿ ನಿಪ್ಪಾಣಿಯಲ್ಲಿ ಚಿಕ್ಕ ಜಾಗ ಖರೀದಿಸಲಾಯಿತು. ಆಗ ಹಿಂಸಾಚಾರ ಎಸಗುವ ಬೆದರಿಕೆ ಹಾಕಿದ ಸ್ಥಳೀಯ ಪಾತಕಿಗಳ ವಿರುದ್ಧ ಶಬಾನಾಳಾ ನಾಯಕತ್ವದಲ್ಲಿ ಪೊಲೀಸರಿಗೆ ಲಿಖಿತ

ದೂರು ಸಲ್ಲಿಸಲಾಯಿತು. ಆದರೆ ಇದರಿಂದಾದ ಪರಿಣಾಮ ಮಾತ್ರ ಬೇರೆ. ವೇಶ್ಯಾವೃತ್ತಿಯಲ್ಲಿರುವ ಇತರ 30 ಮಹಿಳೆಯರೊಂದಿಗೆ ಶಬಾನಾಳನ್ನೇ ನಿಷ್ಪಾಣಿಯಿಂದ ಹೊರಹಾಕಲಾಯಿತು. ಸ್ಥಳೀಯ ಪೊಲೀಸರು ಹಾಗೂ ಶಿವಸೇನಾ ರಾಜಕಾರಣಿಗಳು ಇದರ ಹಿನ್ನೆಲೆಯಲ್ಲಿ ಇದ್ದದ್ದು ಸ್ಪಷ್ಟವಾಗಿತ್ತು. ಶಬಾನಾಳ ಹತ್ಯೆಯ ಬೆದರಿಕೆಗಳೂ ಬಂದವು. 'ಸಂಗ್ರಾಮ' ಸಂಘಟನೆಯ ಜತೆಗೂಡಿ ಶಬಾನಾಳು ತನ್ನ ಹೋರಾಟ ಮುಂದುವರಿಸಿದ್ದಾಳೆ. ಈ ವರ್ಷ ಎಂದರೆ 2000 ದ ಏಪ್ರಿಲ್ 28 ರಂದು 'ಅನ್‌ರ್ಝಿಪ್ಡ್' ಪುಸ್ತಕವನ್ನೂ ಮುಂಬೈನಲ್ಲಿ ಬಿಡುಗಡೆ ಮಾಡಿದ್ದು ಈ ಶಬಾನಾಳೇ.

ವೇಶ್ಯಾವಾಟಿಕೆ ವೃತ್ತಿಯನ್ನು 'ಲೈನ್' ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಏಕೆಂದರೆ ಲೈಂಗಿಕ ಕಾರ್ಯಕರ್ತೆಯರು ಸಾಮಾನ್ಯವಾಗಿ ಗಿರಾಕಿಗಳನ್ನು ಆಕರ್ಷಿಸಲು ಸಾಲಿನಲ್ಲಿ ನಿಲ್ಲುತ್ತಾರೆ ಎಂಬ ಅಂಶ ವೇಶ್ಯಾವೃತ್ತಿಯ ಪ್ರಪಂಚದಲ್ಲಿ ಪ್ರಚಲಿತವಾಗಿದೆ.

'ತಮ್ಮ ಗಿರಾಕಿಗಳ ಜತೆ ಕಾಂಡೋಮ್ ಬಳಕೆಗೆ ಒತ್ತಾಯಿಸುತ್ತಾರೆ. ಆದರೆ ಪ್ರಿಯಕರರ ಜತೆ ಒತ್ತಾಯಿಸುವುದಿಲ್ಲ ಎಂದು ಉಮಾ ಹೇಳುವ ಮಾತುಗಳು, ಲೈಂಗಿಕ ಕಾರ್ಯಕರ್ತೆಯರ ಬದುಕಿನ ಅಂತರಂಗವನ್ನೇ ತೆರೆದಿಡುತ್ತದೆ.

ಒಟ್ಟಾರೆಯಾಗಿ ವೇಶ್ಯೆಯರೆಂದರೆ ಬರೀ ಅಂಕಿ ಅಂಶಗಳಲ್ಲ. ಅವರೊಳಗಿನ ಧ್ವನಿಗಳ ಆಲಿಸುವಿಕೆ, ವೇಶ್ಯಾವಾಟಿಕೆ ಎಂದರೆ ನಿಜವಾಗಿ ಏನು, ಹೇಗಿದೆ ಎಂಬುದನ್ನೂ ಅನಾವರಣಗೊಳಿಸುತ್ತಾ ಸಾಗುತ್ತದೆ. ಇದು ಶಾಶ್ವತ ಕಪ್ಪು ಬಣ್ಣದ ವಿಶ್ವವಲ್ಲ. ಆದರೆ ಬೂದು ಬಣ್ಣದ ಲಕ್ಷಾಂತರ ಛಾಯೆಗಳಲ್ಲಿ ಬಿಂಬಿತವಾಗುವಂತಹ ದೃಶ್ಯ ಇದು. ವೇಶ್ಯೆಯರ ನಿತ್ಯ ಬದುಕಿನ ಹಿಂದೆ ಹೆಜ್ಜೆ ಹಾಕುತ್ತಾ ಕ್ಯಾಮೆರಾದಲ್ಲಿ ಹಾಗೂ ಅಕ್ಷರ ರೂಪದಲ್ಲಿ ಸೆರೆ ಹಿಡಿಯುತ್ತಾ ವೇಶ್ಯೆಯರ 'ಮತ್ತೊಂದು ಮಗ್ಗುಲಿ'ನ ಧ್ವನಿಯ ಬಗ್ಗೆ ಓದುಗರನ್ನೂ ವೀಕ್ಷಕರನ್ನೂ ಸಂವೇದನಾಶೀಲರಾಗಿಸಲು 'ಅನ್‌ರ್ಝಿಪ್ಡ' ಪುಸ್ತಕ ಹಾಗೂ 'ಇನ್ ದಿ ಫ್ಲೆಷ್' ಚಿತ್ರ ಯತ್ನಿಸಿದೆ.

BOOK-POST
PRINTED MATTER

REGD No. : CPMG/KA/BGE/289/2003

ವಾರ್ಷಿಕ ಚಂದಾ : 100 ರೂ
ಸಂಸ್ಥೆಗಳಿಗೆ : 150 ರೂ

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067